ಎಸ್. ಜಿ. ವಾಸುದೇವ್
S. G. Vasudev

ಕೆ. ವಿ. ಸುಬ್ರಹ್ಮಣ್ಯಂ
K. V. Subramanyam



ಕರ್ನಾಟಕ ಲಲಿತಕಲಾ ಅಕಾಡೆಮಿ
KARNATAKA LALITHAKALA ACADEMY

S. G. Vasudev

S.V. Subramaniyam

ಎಸ್. ಜಿ. ವಾಸುದೇವ್
S. G. Vasudev

ಕೆ. ವಿ. ಸುಬ್ರಹ್ಮಣ್ಯಂ

K. V. Subramanyam

ಕರ್ನಾಟಕ ಲಲಿತಕಲಾ ಅಕಾಡೆಮಿ

ಕನ್ನಡ ಭವನ, ಜೆ.ಸಿ ರಸ್ತೆ, ಬೆಂಗಳೂರು - ೫೬೦ ೦೦೨

Karnataka Lalithakala Academy

Kannada Bhavan, J.C. Road, Bangaloe - 560 002

S. G. VASUDEV - A Monograph written by **K.V. Subramanyam,** 40/3, 10th Cross, 1st Main, Bapujinagar, Bangalore - 560 026, and Published by **H. Shankarappa**, Registrar, Karnataka Lalithakala Academy, Kannada Bhavana, J.C.Road, Bangalore - 560 002.

First Edition : 2001
1000 Copies

Pages : viii + 40 + xvi + iv

Price : **Rs. 40-00**

ಪ್ರಧಾನಸಂಪಾದಕರು : ಪ್ರೊ. ವಿ.ಜಿ. ಅಂದಾನಿ

ಪ್ರಕಟಣಾ ಸಮಿತಿ :
ಶ್ರೀ. ಟಿ. ದೇವೇಂದ್ರ
ಶ್ರೀ. ಬಿ. ಆರ್. ಕೊರ್ತಿ
ಶ್ರೀ. ಎಸ್. ಎಂ. ಜಂಭುಕೇಶ್ವರ
ಶ್ರೀ. ಬಸವರಾಜ ಗವಿಮಠ
ಶ್ರೀ. ಈರಣ್ಣ ದಂಡಿನ್

ಇಂಗ್ಲೀಷ್ ಅನುವಾದ : ರವಿಕುಮಾರ್ ಕಾಶಿ
English Translation : Ravikumar Kashi

ಪ್ರಕಾಶಕರು :
ಶ್ರೀ. ಹೆಚ್. ಶಂಕರಪ್ಪ
ರಿಜಿಸ್ಟ್ರಾರ್

Cover page painting : 'ವೃಕ್ಷ' - 1984, ಮಾಧ್ಯಮ : ತೈಲವರ್ಣ
ವೈಶಾಲ್ಯ : 77 x 90 ಸೆಂ.ಮಿ.
'Vriksha' -1984, Medium : Oil on Canvas
Size : 77x 90 Cms

Back Cover page Painting : 'ಥಿಯೇಟರ್ ಆಫ್ ಲೈಫ್'-1996
ಮಾಧ್ಯಮ : ತೈಲವರ್ಣ. ವೈಶಾಲ್ಯ : 180 x 120 ಸೆಂ.ಮಿ.
'Theatre of Life' -1996, Medium:Oil on Canvas
Size : 180x 120 Cms

Lettersetting & Printing :
Sathyasri Printers Pvt. Ltd.,
No. 164, 5th Main, Chamarajpet
Bangalore - 560 018 **Ph : 6525736**

ಅಧ್ಯಕ್ಷರ ಮಾತು

ದೃಶ್ಯಕಲೆಯ ಪುಸ್ತಕ ಪ್ರಕಟಣೆಯಲ್ಲಿ ಇಡೀ ಭಾರತದ ದೇಶೀಭಾಷೆಗಳಲ್ಲಿ ಕರ್ನಾಟಕ ಲಲಿತ ಕಲಾ ಅಕಡೆಮಿ ಗಣನೀಯ ಕೆಲಸವನ್ನು ಮಾಡಿದೆ. ಅದೇ ಹಾದಿಯಲ್ಲಿ ಹಲವು ದಿಟ್ಟ ಹೆಜ್ಜೆಗಳನ್ನೂ ಇಡುತ್ತಾ ಸಾಗುತ್ತಿದೆ. ಕನ್ನಡದ ಹಿರಿಯ, ಸಮಕಾಲೀನ ಕಲಾವಿದರನೇಕರ ಕಲೆಯ ಕುರಿತ ಪ್ರಕಟಣೆಗಳು ಸಂಖ್ಯೆಯಿಂದ ಮಾತ್ರವೇ ಅಲ್ಲದೆ ಗುಣ ಮೌಲ್ಯದಿಂದಲೂ ಹೆಚ್ಚಿನದನ್ನು ಸಾಧಿಸಿರುವುದು ಸಹೃದಯರಾದ ತಮಗೆಲ್ಲಾ ಪರಿಚಿತ. ಕನ್ನಡ ದೃಶ್ಯಕಲೆಯ ಕಲಾವಿದರೇ ಅಲ್ಲದೆ ಕಲೆ, ಅದರ ಹಲವು ಮಗ್ಗಲುಗಳ, ನೋಟ ಪಲ್ಲಟಗಳ ಕುರಿತ ಈ ಪ್ರಕಟಣೆಗಳಲ್ಲಿ ಐತಿಹಾಸಿಕತೆಯ ಜತೆ ಜತೆಗೆ ಸಮಕಾಲೀನತೆಯನ್ನೂ ಬಿಂಬಿಸಲಾಗಿದೆ. ಈ ಪ್ರಕಟಣೆಗಳು ಕಲಾವಿದಾರ್ಥಿಗಳಷ್ಟೇ ಆಸಕ್ತ ಕಲಾಭಿಮಾನಿಗಳಿಗೂ, ಕನ್ನಡ ಕಲೆಯ ಅಧ್ಯಯನಶೀಲರಿಗೂ ಉಪಯುಕ್ತ ಆಕರಗಳಾಗಿಯೂ ಮೂಡಿಬಂದಿವೆ. ಈ ದೃಷ್ಟಿಯಿಂದ ಪ್ರಸ್ತುತ ನಿಮ್ಮ ಕೈಯಲ್ಲಿರುವ ಈ 'ಎಸ್.ಜಿ. ವಾಸುದೇವ್' ಪ್ರಕಟಣೆಯೂ ಒಂದು. ಶ್ರೀ ವಾಸುದೇವ್ ಕನ್ನಡದ ಬಹುಮುಖ್ಯ ಕಲಾವಿದರಲ್ಲೊಬ್ಬರು. ಅವರ ಅಭಿವ್ಯಕ್ತಿಕುರಿತ ಹಲವು ಒಳನೋಟಗಳ ಈ ಪ್ರಕಟಣೆಯನ್ನು ಸಾಕಷ್ಟು ಸುಂದರವಾಗಿ ತರಲು ಪ್ರಯತ್ನಿಸಿದ್ದೇವೆ. ಭಾರತೀಯ ಸಮಕಾಲೀನ ಕಲೆಯಲ್ಲಿ ತಮ್ಮದೇ ಆದ ವಿಶಿಷ್ಟ ಸ್ಥಾನ ರೂಪಿಸಿಕೊಂಡಿರುವ ಶ್ರೀ ವಾಸುದೇವ್ ಇಲ್ಲಿ ಹಲವು ರೀತಿಗಳಲ್ಲಿ ವಿಮರ್ಶಕ ಶ್ರೀ ಕೆ.ವಿ. ಸುಬ್ರಹ್ಮಣ್ಯಂ ರವರಿಂದ ತಮ್ಮನ್ನು ಬಿಚ್ಚಿಕೊಂಡಿದ್ದಾರೆ. ಕನ್ನಡ ಸಂಸ್ಕೃತಿಯಲ್ಲಿ ತಮ್ಮ 'ವೃಕ್ಷ' ಕೃತಿಮಾಲೆಯ ಕಲ್ಪನೆಯಿಂದ ಅನನ್ಯತೆ ಸಾಧಿಸಿ ಖ್ಯಾತರಾಗಿರುವ ಶ್ರೀ ವಾಸುದೇವ್‌ರವರ ಕಲೆ, ಕಲೆಯ ಸಂದರ್ಭದ ಜತೆ ಜತೆಗೇ ಅವರ ಬದುಕಿನ ಹಲವು ನೋಟಗಳಲ್ಲಿ social activist ಆಯಾಮ ಮೊದಲ ಬಾರಿಗೆ ನಮ್ಮ ಕಲಾಭಿಮಾನಿ ಓದುಗರಿಗೆ ಈ ಪ್ರಕಟಣೆಯ ಮೂಲಕ ತೆರೆದು ಕೊಂಡಿದೆ ! ನಮ್ಮ ಹಿರಿಯ ವಿಮರ್ಶಕ, ಬರಹಗಾರರಲ್ಲಿ ಒಬ್ಬರಾಗಿರುವ ಶ್ರೀ ಕೆ.ವಿ. ಸುಬ್ರಹ್ಮಣ್ಯಂರ ಗ್ರಹಿಕೆಯಲ್ಲಿ ಈ ಪುಸ್ತಕ ವಿಶಿಷ್ಟವಾಗಿ ರೂಪುಗೊಂಡಿದೆಯಲ್ಲದೆ ೧೯೮೦-೨೦೦೦ ದ ನಡುವಿನ ಕನ್ನಡದ ಕಲಾ ಇತಿಹಾಸದ ಹಲವು ಹೊಳಹುಗಳೂ ದಾಖಲೆಗೊಂಡಿವೆ. ಈ ಎಲ್ಲ ಕಾರಣಗಳಿಗಾಗಿ ಅವರಿಗೆ ಅಕಾಡೆಮಿಯ ಪರವಾಗಿ ಹಾಗೂ ವೈಯಕ್ತಿಕವಾಗಿ ಅಭಿನಂದನೆಗಳು. ಈ ಪುಸ್ತಕವನ್ನು ಸಾಕಷ್ಟು ಸುಂದರವಾಗಿ ಮುದ್ರಿಸಿಕೊಟ್ಟಿರುವ 'ಸತ್ಯಶ್ರೀ ಪ್ರಿಂಟರ್ಸ್' ರವರಿಗೆ, ಈ ಪ್ರಕಟಣೆಯ ಇಂಗ್ಲೀಷ್ ಅನುವಾದಕರಾಗಿರುವ ಶ್ರೀ ರವಿಕುಮಾರ್ ಕಾಶಿಯವರಿಗೂ ನನ್ನ ಹಲವು ಕಾರ್ಯಯೋಜನೆಗಳನ್ನು ಸಾಕಾರವಾಗಿಸಿ ಸಹಕರಿಸುತ್ತಿರುವ ನನ್ನ ಅಕಡೆಮಿಯ ಎಲ್ಲ ಸದಸ್ಯರಿಗೂ, ರಿಜಿಸ್ಟ್ರಾರ್ ಶ್ರೀ ಶಂಕರಪ್ಪ ಹಾಗೂ ಇನ್ನಿತರ ಸಿಬ್ಬಂದಿ ವರ್ಗ ದವರಿಗೂ ನನ್ನ ಕೃತಜ್ಞತೆಗಳು. ಎಂದಿನಂತೆ ಕಲಾವಿದರು ಕಲಾರಸಿಕರು ಮತ್ತು ಕಲಾ ಸಾಹಿತ್ಯಾಭಿಮಾನಿಗಳು ಈ ದ್ವಿಭಾಷಾ ಪುಸ್ತಕವನ್ನು ಸ್ವಾಗತಿಸುತ್ತೀರೆಂದು ಭಾವಿಸಿದ್ದೇವೆ.

ದಿನಾಂಕ ೨೨.೩.೨೦೦೧
ಬೆಂಗಳೂರು

ಪ್ರೊ. ವಿ.ಜಿ. ಅಂದಾನಿ
ಅಧ್ಯಕ್ಷರು

ನಿಮ್ಮೊಂದಿಗೆ ...

ನನ್ನ ಕಣ್ಣು – ಮನಸ್ಸುಗಳು ದೃಶ್ಯಕಲೆಯ ಹಲವು ಆಯಾಮ, ಸಾಧ್ಯತೆಗಳನ್ನು ಗ್ರಹಿಸಲಾರಂಭಿಸಿದ ಸಂದರ್ಭದ ಆರಂಭದಲ್ಲಿಯೇ ಆಕರ್ಷಿಸಿದವರು ಎಸ್.ಜಿ.ವಾಸುದೇವ್. ೧೯೭೦-೮೦ರ ದಶಕದಲ್ಲಿ ಜನಪ್ರಿಯತೆಯನ್ನು ಹೊಂದಿದ್ದ ಅವರ ಕಲಾಕೃತಿಗಳು ಹಲವೆಡೆ ನನ್ನನ್ನು ಕೌತುಕದಿಂದ ನೋಡಿ, ಅನುಭವಿಸುವಂತೆ ಮಾಡಿದ್ದವು. ನವದೆಹಲಿಯ ಆಧುನಿಕ ಕಲಾ ಗ್ಯಾಲರಿಯ ಸಂಗ್ರಹದ ದೊಡ್ಡ ಅಳತೆಯ 'ವೃಕ್ಷ' ಶೀರ್ಷಿಕೆಯ ಕೃತಿಯೊಂದು ಬಹುವಾಗಿ ನನ್ನನ್ನು ಕಾಡಿದೆ. ನನ್ನ ವಾಸುದೇವ್‌ರವರ 'ಪರಸ್ಪರ' ಅವರ ಬಿಡವಿಲ್ಲದ ಓಡಾಟ ದಿನಚರಿಯ ನಡುವೆ ಅಷ್ಟೇನೂ ಹೆಚ್ಚಾಗಿರಲಿಲ್ಲ. ಆದರೂ ಅವರ ಕಲಾಕೃತಿಗಳನ್ನು ನೋಡುವ, ಚರ್ಚಿಸುವ ಅವಕಾಶ ಆಗಾಗ ಸಾಧ್ಯವಾಗುತ್ತಿತ್ತು. ಅವರ ಎಲ್ಲ ಹೊಸ ಕೃತಿಗಳ ಪ್ರದರ್ಶನದ ವ್ಯವಸ್ಥೆಗಳು ಹೆಚ್ಚಿನ ವೃತ್ತಿಪರತೆಯಿಂದ, ಉತ್ತಮ ರೀತಿಯಲ್ಲಿ ವ್ಯವಸ್ಥೆಯಾಗುತ್ತಿದ್ದುದರಿಂದ ಅವರ ಅಭಿವ್ಯಕ್ತಿಯ ಹಲವು ಅಥವಾ ಬಹುತೇಕ ಎಲ್ಲ ಮಜಲುಗಳನ್ನೂ ಅಧ್ಯಯನ ಮಾಡುವ ಅವಕಾಶಗಳು ಹೆಚ್ಚು. ಜತೆಗೆ ಹೆಬ್ಬಾರ್ ನಮ್ಮ ನಡುವೆ ಹೆಚ್ಚಿನ ಚಟುವಟಿಕೆಯಿಂದ ಇದ್ದ ೧೯೭೦ರ ದಶಕದಿಂದ ಹಾಗೂ ಕಲಾಮೇಳದ ಸಂದರ್ಭಗಳಲ್ಲಿಯೂ ನಮ್ಮ ಹಲವು ಕಲಾವಿದರಂತೆ ನನಗೂ ಚೋಳಮಂಡಲದಿಂದ ಬರುತ್ತಿದ್ದ ವಾಸುದೇವರನ್ನು ಹೆಚ್ಚಿನ ರೀತಿಯಲ್ಲಿ 'ನೋಡುವುದು' ಸಾಧ್ಯವಾಯಿತು.

ನಮ್ಮ ಅತಿ ಮುಖ್ಯ ಕಲಾವಿದರಲ್ಲಿ ಒಬ್ಬರಾಗಿರುವ ಅವರ ಹಲವು ಮುಖಗಳೊಂದಿಗೆ ಮುಖಾಮುಖಿಯಾಗುವ ಸೀಮಿತ ಪ್ರಯತ್ನ ಈ ಪುಸ್ತಕದಲ್ಲಿ ಆಗಿದೆ. ಸಾಮಾನ್ಯರಿಗೆ ನಮ್ಮ ಬಹುಮುಖ್ಯ ಕಲಾವಿದರನ್ನು ಪರಿಚಯಿಸುವ ಅಕಡೆಮಿಯ ಉದ್ದೇಶವನ್ನು ಗಮನದಲ್ಲಿಟ್ಟು ಈ ಪುಸ್ತಕವನ್ನು ರೂಪಿಸಿದ್ದು, ವಾಸುದೇವ್ ರವರ ಹಲವು ಮಜಲುಗಳ ಅಭಿವ್ಯಕ್ತಿಯ ಸಿಂಹಾವಲೋಕನದ ಜತೆಗೆ ಗ್ರಹಿಕೆಯ ಹಲವು ಒಳನೋಟಗಳನ್ನೂ ನೋಡಲು ಪ್ರಯತ್ನಿಸಲಾಗಿದೆ. ನನ್ನ ಈ ಪ್ರಯತ್ನಗಳಿಗೆ ನಾನು ನಿರೀಕ್ಷಿಸಿದಾಗಲೆಲ್ಲಾ ನನ್ನೊಂದಿಗಿನ ಮುಖಾಮುಖಿಗೆ ವಾಸುದೇವ್ ಬಿಡುವು ಮಾಡಿಕೊಂಡು ಸಿಕ್ಕಿದ್ದಾರೆ. ಅವರೊಂದಿಗೆ ಅಮ್ಮು ಜೋಸೆಫ್ ಸಹ ನೆರವಾಗಿದ್ದಾರೆ. ಈ ಪುಸ್ತಕ ಮೂಡಿಬರಲು ಅಕೆಡೆಮಿಯ ಅಧ್ಯಕ್ಷರಾಗಿರುವ ಪ್ರೊ.ವಿ.ಜಿ. ಅಂದಾನಿ, ರಿಜಿಸ್ಟ್ರಾರ್ ಶಂಕರಪ್ಪ ಹಾಗೂ ಹಲವು ರೀತಿಗಳಲ್ಲಿ ನೆರವಾಗಿರುವ ಹಲವರು, ಅದರಲ್ಲೂ ಎನ್. ಮರಿಶಾಮಾಚಾರ್, ಎಚ್.ಎ. ಅನಿಲ್ ಕುಮಾರ್, ಅಲ್ಲದೆ ಅಕಡೆಮಿಯ ಪ್ರಕಟಣಾ ಸಮಿತಿಯ ಸದಸ್ಯರು, ಸತ್ಯಶ್ರೀ ಪ್ರಿಂಟರ್ಸ್‌ನ ಗೆಳೆಯರು ಇವರೆಲ್ಲರಿಗೂ ಕೃತಜ್ಞತೆಗಳನ್ನು ಹೇಳಲೇಬೇಕು.

ದಿನಾಂಕ ೨೪.೩..೨೦೦೧ — **ಕೆ.ವಿ. ಸುಬ್ರಹ್ಮಣ್ಯ**

ಬೆಂಗಳೂರು

ಪರಿವಿಡಿ

ಪುಟಸಂಖ್ಯೆ



ಎಸ್. ಜಿ. ವಾಸುದೇವ್

Where did the infinite show itself ? In nature, and all individual mythologies must be deduced from a philosophy of nature, through one contemplation of the universe. ***- Robert Hughes*** [1]

ಪ್ರಕೃತಿಯನ್ನು ಅನುಸರಿಸುತ್ತ, ಅನುಕರಿಸುತ್ತಾ, ನಕಲು ಮಾಡುತ್ತಾ ಬೆಳೆಯುವ ಮನುಷ್ಯ ಅಂತಿಮವಾಗಿ ಪ್ರಕೃತಿಯನ್ನು ಪ್ರಶ್ನಿಸುವ ಕಲಾವಿದನಾಗಿ ಪ್ರತಿಸೃಷ್ಟಿಗೆ ಕಾರಣನಾಗುವಂತೆ ರೂಪುಗೊಳ್ಳುವ ಬೆಳವಣಿಗೆ ಮತ್ತು ಪ್ರಕೃತಿಯು ಕಲೆಯಾಗಿ ರೂಪಾಂತರಗೊಳ್ಳುವ ಪ್ರಕ್ರಿಯೆ ರೋಮಾಂಚಕಾರಿ. Aesthetic shock ನಂಥ ನೋಟವನ್ನು ಪಲ್ಲಟಗೊಳಿಸುವ ಈ ಸೃಷ್ಟಿಪ್ರಕ್ರಿಯೆಯ 'ಪರಸ್ಪರ', ಕಲಾ ಇತಿಹಾಸಕ್ಕೆ ವೈವಿಧ್ಯಮಯ ರೂಪರೇಖೆಗಳನ್ನು ನೀಡಿದೆ.

ಈ ಹಾದಿಯಲ್ಲಿ ನಡೆದುಬಂದಿರುವ ಕಲಾವಿದರಲ್ಲಿ ಎಸ್.ಜಿ. ವಾಸುದೇವ್ ಒಬ್ಬರು. ಮೈಸೂರು – ಬೆಂಗಳೂರು – ಮದರಾಸುಗಳನ್ನು ದಾಟಿ ಭಾರತದ ಪ್ರಮುಖ ಕಲಾಕೇಂದ್ರಗಳನ್ನು ಹಾದು ಅಂತರ್‌ರಾಷ್ಟ್ರೀಯ ಮಟ್ಟದಲ್ಲೂ ಪರಿಚಿತರಾಗಿರುವ ವಾಸುದೇವ್ ಮೈಸೂರು ನಗರದ ಹಳೆಯ ಅಗ್ರಹಾರದಲ್ಲಿನ ಕಲೆಯ ವಾತಾವರಣವಿದ್ದ ಕುಟುಂಬದಲ್ಲಿ ಮಾರ್ಚ್ ೩, ೧೯೪೧ ರಲ್ಲಿ ಹುಟ್ಟಿದರು. ಮೈಸೂರು ಅರಮನೆಯ ಸಂಪರ್ಕ ಹೊಂದಿದ್ದ ಮುತ್ತಾತ ಕಲೆಯ ಬಗೆಗೂ ಆಸಕ್ತರಾಗಿದ್ದವರು. ಸೋಪ್ ಸ್ಟೋನ್‌ನಲ್ಲಿ ಹಲವಾರು ಶಿಲ್ಪಗಳನ್ನು ಸೃಷ್ಟಿಸಿದ್ದರು; ದಶಾವತಾರದ ರೂಪಗಳೂ ಅವರ ಕೃತಿಗಳಲ್ಲಿ ಕಾಣಿಸಿಕೊಂಡಿದ್ದವು. ಇಂಥ ಪರಿಸರದಲ್ಲಿ ಬೆಳೆದ ವಾಸುದೇವ್‌ರ ತಾಯಿ ಮತ್ತು ಚಿಕ್ಕಪ್ಪ ಸಹಜವಾಗಿಯೇ ಕಲೆಯತ್ತ ಆಕರ್ಷಿಸಲ್ಪಟ್ಟರು. ಪ್ರಾಚೀನ ಯೂರೋಪಿಯನ್ ಕಲಾಕೃತಿಗಳನ್ನು ನಕಲು ಮಾಡುವಲ್ಲಿ ಕುಶಲತೆಯನ್ನುಪ್ರದರ್ಶಿಸಿದ್ದ ವಾಸುದೇವ್ ರವರ ತಾಯಿ, ಹಲವು ವರ್ಷಗಳ ಕಲಾಭ್ಯಾಸದಿಂದ ಕಲಾಸೃಷ್ಟಿಯ ತಂತ್ರ, ಅರಿತಿದ್ದರು. ರವಿವರ್ಮನನ್ನು ನೆನಪಿಸುವಂಥ ರೂಪ ಸಂಯೋಜನೆಯ ರಾಮ, ಲಕ್ಷ್ಮಣ, ಸೀತೆ, ಹನುಮಂತನಿರುವ ಕಲಾಕೃತಿ ಗಮನಾರ್ಹ. ಪಶ್ಚಿಮದ ಪ್ರಭಾವ ಅದರಲ್ಲೂ ಸೆಝಾನ್, ಗಾಗಿನ್, ವಿನ್‌ಸೆಂಟ್ ವ್ಯಾನ್‌ಗಾಗ್ ರಂಥ ಕಲಾವಿದರ ಹಾಗೂ ಕೆಲವು ಇಂಪ್ರೆಷನಿಸ್ಟ್ ಕಲಾವಿದರ ಪ್ರಭಾವವಿದ್ದ ಹಲವು ಕೃತಿಗಳನ್ನೂ ಅವರು ರಚಿಸಿದ್ದರು. ರವಿವರ್ಮನ ಕಲಾಕೃತಿಗಳ ಪುರಾಣವ್ಯಕ್ತಿಗಳ ರೂಪ, ದೃಶ್ಯ ಕಲ್ಪನೆಗೆ ಆಕರ್ಷಿಸಲ್ಪಟ್ಟಿದ್ದ ಅವರು ಮೈಸೂರು ಶೈಲಿಯ ಹಲವು ಕೃತಿಗಳನ್ನು ನಕಲು ಮಾಡಿದ್ದರು.[2]

ಈ ಹಿನ್ನೆಲೆಯಲ್ಲಿ ಬಾಲ್ಯವನ್ನು ಕಳೆದ ವಾಸುದೇವ್, ಮೈಸೂರಿನ ಅರಮನೆ, ದಸರಾ ಉತ್ಸವದ ಜೊತೆ ಜೊತೆಗೇ ಆನೆಗಳ ಮೆರವಣಿಗೆಯನ್ನು ತಮ್ಮ ಬಾಲ್ಯದ ಕುತೂಹಲದ ಕಣ್ಣುಗಳಿಂದ ಮನದಾಳದಲ್ಲಿ ತುಂಬಿಕೊಂಡು, ಸಾಮಾನ್ಯ ಶಿಕ್ಷಣಕ್ಕಾಗಿ ಬೆಂಗಳೂರಿಗೆ ಮಧ್ಯಮ ವರ್ಗದ ವಿದ್ಯಾರ್ಥಿಯಾಗಿ ಬಂದವರು.

1. Robert Hughes in 'Nothing if not critical' - P. 90, Penguin books New York, USA, 1990.
2. ಪ್ರಸ್ತುತ ಈ ಕೃತಿಗಳು ಬೆಂಗಳೂರಿನ ರಾಮ್‌ಕುಮಾರ್‌ರವರ ಕಲಾ ಸಂಗ್ರಹದಲ್ಲಿವೆ.

ಮೈಸೂರಿನ ಪರಿಸರದ ಆ ಪ್ರಭಾವ ಎಷ್ಟೆಂದರೆ ಅವರೇ ಹೇಳಿಕೊಳ್ಳುವಂತೆ ಬೆಂಗಳೂರಿಗೆ ಬಂದ ಹಾಗೂ ಆ ನಂತರದಲ್ಲಿ ಸೃಷ್ಟಿಯಾದ ಹಲವಾರು ಕೃತಿಗಳಲ್ಲಿ ಮೂಡಿಬಂದಿವೆ. ಇಂಥ ಪ್ರೀತಿಯಿಂದ ಮಧ್ಯಪ್ರದೇಶದ ಬಸ್ತಾರ್‌ನಿಂದ ಆನೆಯ ಶಿಲ್ಪವನ್ನು ತಂದಿದ್ದನ್ನು ಕಂಡ ಅರ್ನಾವಾಝ್ ತಮ್ಮ ಕಲಾಕೃತಿಯೊಂದರಲ್ಲೂ ಜಾನಪದೀಯ ಸತ್ವಗಳು ಆ ಆನೆಯ ರೂಪವನ್ನು ತಂದುಕೊಂಡರು.

ಬೆಂಗಳೂರಿನ ನ್ಯಾಷನಲ್ ಕಾಲೇಜಿನಲ್ಲಿ ಮಧ್ಯಮ ವರ್ಗದ ಅತ್ಯಂತ ಶಿಸ್ತಿನ ವಿದ್ಯಾರ್ಥಿಯಾಗಿ ಗಣಿತ, ಭೌತಶಾಸ್ತ್ರ ಮತ್ತು ರಸಾಯನ ಶಾಸ್ತ್ರಗಳನ್ನು ಅಧ್ಯಯನದ ಐಚ್ಛಿಕ ವಿಷಯಗಳನ್ನಾಗಿ ಆಯ್ಕೆಮಾಡಿಕೊಂಡು, ಅಷ್ಟೇನೂ ಉತ್ಸಾಹದಿಂದಲ್ಲದೆ ಕಾಲೇಜಿನ ಅಂತಿಮ ಹಂತದವರೆಗೂ ಬಂದ ವಾಸುದೇವ್‌ರವರಿಗೆ ಅವರ ಕಾರ್ಟೂನ್ ಮತ್ತು ಕ್ಯಾರಿಕೇಚರ್ ಗಳು ಬೆಂಗಳೂರಿನ ಪತ್ರಿಕೆಗಳಲ್ಲಿ ಪ್ರಕಟವಾದಾಗ ಅವರೊಳಗಿನ ಕಲಾವಿದ ಎಚ್ಚರಗೊಳ್ಳುವಂತಾಯಿತು. ಮುಂಬಯಿಯಲ್ಲಿ ವಿಜ್ಞಾನಿಯಾಗಿದ್ದ ಅವರ ಸೋದರ ಬಂಧು ಮತ್ತು ಆ ಸಂದರ್ಭದಲ್ಲಿ ಕಲಾ ಬರಹಗಾರರಾಗಿ ಪರಿಚಿತರಾಗಿದ್ದ ದಿ। ವಿ. ವೆಂಕಟಾಚಲಂ ಈ ಇಬ್ಬರ ಪ್ರೋತ್ಸಾಹದಿಂದ ಮದರಾಸಿನ ಕಲಾಶಾಲೆಯಲ್ಲಿ ಕಲೆಯನ್ನು ಕಲಿಯಲು ಹೋಗುವಂತಾಯಿತು. ಡೇವಿಡ್ ಲೋ ಮತ್ತು ಆರ್. ಕೆ. ಲಕ್ಷ್ಮಣ್‌ರವರ ವ್ಯಂಗ್ಯ ಚಿತ್ರಗಳನ್ನು ವಾಸುದೇವ್ ಮೆಚ್ಚಿಕೊಂಡಿದ್ದರು.

ಕೆ.ಸಿ.ಎಸ್. ಪಣಿಕರ್ ರವರು ಪ್ರಿನ್ಸಿಪಾಲರಾಗಿದ್ದ ಮದರಾಸು ಕಲಾಶಾಲೆಯಲ್ಲಿ ಕಲೆಯ ಪ್ರಾಥಮಿಕ ಪಾಠಗಳನ್ನು ವಿಶಿಷ್ಟ ರೀತಿಯಲ್ಲಿ ಕಲಿಯುವ ವಾತಾವರಣ ವಾಸುದೇವ್ ರವರಿಗೆ ಆಪ್ತವಾಯಿತು. ಕಲೆಯನ್ನು ಕಲಿಯುವುದು ಎಂಬ ಮಾತುಗಳಿಗೆ ವಿಭಿನ್ನವಾಗಿ ಕಲೆಯನ್ನು ಅನುಭವಿಸುವುದು, ಅದರೊಂದಿಗೆ ಜೀವಿಸುವುದು ಎಂಬಂತೆ ಅವರು ಕಲಿತರು. ಅವರ ಗುರು ಪಣಿಕರ್ ಹಲವು ಆಯಾಮಗಳ ವ್ಯಕ್ತಿತ್ವ ಹೊಂದಿದ್ದ ಅತ್ಯುತ್ತಮ ಕಲಾವಿದರು ಮಾತ್ರವೇ ಅಲ್ಲದೆ ಅತ್ಯುತ್ತಮ ಕಲಾ ಶಿಕ್ಷಕರೂ ಆಗಿದ್ದರು. ಹೀಗಾಗಿ ವಾಸುದೇವ್‌ರವರ ಚಿತ್ರ, ಶಿಲ್ಪ, ಗ್ರಾಫಿಕ್ ಪ್ರಿಂಟ್, ವಾಣಿಜ್ಯ ಕಲೆ ಹೀಗೆ ಹಲವು ಹಾದಿಗಳಿಗೆ ಪಣಿಕ್ಕರ್ ರವರ ಆತ್ಮೀಯ ಮಾರ್ಗ ದರ್ಶನವಿದ್ದಿತು. ಚಿತ್ರಿಸುವುದರ ಜೊತೆಗೆ ಬದುಕನ್ನು ಸುಂದರ ಗೊಳಿಸುವುದರ ಜೊತೆಗೆ ಬದುಕನ್ನು ಸುಂದರಗೊಳಿಸುವ ನಿಟ್ಟಿನಲ್ಲಿಯೂ ಪಣಿಕ್ಕರ್ ವಾಸುದೇವ್‌ರನ್ನು ಬೆಳೆಸುತ್ತ ಕಲಾಸಂಸ್ಥೆಗಳನ್ನು ನೋಡಿಕೊಳ್ಳುವುದೇ ಅಲ್ಲದೇ ಕಲಾಪ್ರದರ್ಶನಗಳ ವ್ಯವಸ್ಥೆಗೂ ತೊಡಗುವಂತೆ ಮಾಡುತ್ತಿದ್ದರು.

೧೯೬೦ರ ದಶಕದಲ್ಲಿ ವಾಸುದೇವ್ ಮದರಾಸಿನಲ್ಲಿದ್ದಾಗ, ಮುಂಬಯಿಯ Progressive Art Group ನ ಕಲಾವಿದರು ಪಶ್ಚಿಮದ ಪ್ರಭಾವಕ್ಕೆ ಒಳಗಾಗಿ ಚಿತ್ರಿಸುತ್ತ ಸಾಕಷ್ಟು ಕಾಲದಿಂದ ಸುದ್ದಿಯಲ್ಲಿದ್ದರು. ಆದರೆ ಮದರಾಸಿನ ಕಲಾಶಾಲೆಯಲ್ಲಿ ಪಣಿಕ್ಕರ್‌ರವರು ವಾಸುದೇವ್ ಮತ್ತು ಅವರ ಸಹಪಾಠಿಗಳಿಗೆ ಭಾರತೀಯ ethos ಒಳಗೆ ಹೊಕ್ಕು ನೋಡಲು ಪ್ರೋತ್ಸಾಹಿಸಿದರಲ್ಲದೆ, ನಮ್ಮ ಸಂಸ್ಕೃತಿಯ ಹಾಗೂ ಪುರಾಣಗಳಲ್ಲಿನ ನಮ್ಮದೇ ಆದ Idiom ಅನ್ನು ಅನ್ವೇಷಿಸಿಕೊಳ್ಳಲು ಒತ್ತು ನೀಡಿದರು. ಪಣಿಕ್ಕರ್‌ರವರ ಪೌರ್ವಾತ್ಯ ಸಂಸ್ಕೃತಿಯ ಕುರಿತ ಒಲವು[3] ಪಶ್ಚಿಮದ ಪ್ರಖರ

---

3. Orientalism responded more to the culture that produced it than to its putative object, which was also produced by the west. Thus the history of Orientalism has both an internalconsistency ad a highly articulated set of relation ships to the dominant culture surrounding it.

- Edward W. Said in Orientalism, Vintage Books, New York 1979, p: 22

ಪ್ರಭಾವಗಳ ನಡುವೆಯೂ Ahead of time ಸಂಥ ದೃಷ್ಟಿ ಕುತೂಹಲವನ್ನು ಉಂಟುಮಾಡುತ್ತದೆ. ಈ ವಿಶಿಷ್ಟ ಅನುಭವವನ್ನು ಕಂಡುಕೊಂಡು ಸಾರ್ಥಕ ಪಡಿಸುವ ಉದ್ದೇಶದಿಂದಲೇ ಅಪೂರ್ವ, ಕನಸಿನ ಚೋಳಮಂಡಲ ಕಲಾ ಗ್ರಾಮ ಪಣಿಕ್ಕರ್‌ದಿಂದ ಹುಟ್ಟು ಹಾಕಲ್ಪಟ್ಟಿತು. ತಾವೇ ಒಂದು ಸಂಸ್ಥೆಯಂತಿದ್ದ ಪಣಿಕ್ಕರ್ ದಕ್ಷಿಣದಲ್ಲಿ ಕಲೆಯನ್ನು ಪುನರುಜ್ಜೀವನಗೊಳಿಸಲು (Revitalise) ಚೋಳ ಮಂಡಲ ಕಲಾಗ್ರಾಮವನ್ನು ಆಕರ್ಷಕ ರೀತಿಯಲ್ಲಿ ಸಜ್ಜುಗೊಳಿಸಿದರು. ಪೌರ್ವಾತ್ಯಚಿಂತನೆಯ ಅಭಿವ್ಯಕ್ತಿಯ ಈ ಚಳುವಳಿ ೧೯೬೦ರಲ್ಲೂ ಅಲ್ಲಿ ಸಶಕ್ತವಾಗಿಮುಂದುವರೆದಿತ್ತು. ಈ ಕಲಾ ಗ್ರಾಮದಲ್ಲಿ ಕಲಾವಿದರು ಬದುಕುವ ಕಲೆಯನ್ನು ಕಲಾವಿದರಿಗೆ ಪರಿಚಯಿಸಿದರು. ಜೀವನವನ್ನು ಎದುರಿಸುವ, ಅದರೊಂದಿಗೆ ಮುಖಾಮುಖಿಯಾಗುವ ಸತ್ವವನ್ನು ತುಂಬಿದರು.

ಪಣಿಕ್ಕರ್ ಬಗ್ಗೆ ವಾಸುದೇವ್ 'I was fortunate to come under panicker's wing, for he shaped my personality constant interaction with him during my student days and after led me to find my own idiom in contemporary art' ಎಂದು ಹೇಳಿಕೊಂಡಿದ್ದಾರೆ. [4]

ಪಣಿಕ್ಕರ್ ವಾಸುದೇವರಲ್ಲಿ ತುಂಬಿದ್ದ ಸ್ವಾತಂತ್ರ್ಯಮನೋಭಾವ ಹಾಗೂ ಹೊಸ ದೃಷ್ಟಿಕೋನಗಳಿಂದ ಸುತ್ತಲಿನ ಎಲ್ಲವನ್ನು ಗ್ರಹಿಸುವ, ಗ್ರಹಿಸಿ ಅಭಿವ್ಯಕ್ತಿಸುವ ಪ್ರಕ್ರಿಯೆಗಳಲ್ಲಿ ತಮ್ಮದೇ ಆದ identity ಯನ್ನು ಹೊಂದಲು ವಾಸುದೇವ್‌ರಿಗೆ ಸಾಧ್ಯವಾಯಿತು. ಹೀಗೆ ರೇಖೆ ಮತ್ತು ವರ್ಣ ಚಿತ್ರ ಸೃಷ್ಟಿಯನ್ನು ಸ್ವಪ್ರೇರಣೆ ಪಣಿಕ್ಕರ್‌ರ ಸ್ಫೂರ್ತಿಯಿಂದ ಬೆಳೆಸಿಕೊಂಡ ಅವರು "ನೀನು ಏನು ಮಾಡುವೆಯೋ ಅದೇ ಸತ್ಯ" ಎಂದು ಪಣಿಕ್ಕರ್ ಮತ್ತೆ ಮತ್ತೆ ಹೇಳುತ್ತಿದ್ದುದನ್ನು ೧೯೬೦ರಲ್ಲೂ ನೆನಪು ಮಾಡಿಕೊಳ್ಳುತ್ತಾರೆ! ಕಲಾ ಶಾಲೆಯಲ್ಲಿ ತಂತ್ರ ಮತ್ತು ಮಾಧ್ಯಮಗಳನ್ನು ಕಲಿಯುವಾಗ ಬರುವ ಸಮಸ್ಯೆಗಳನ್ನು ನಿವಾರಿಸಲು ನೆರವಾಗುತ್ತಿದ್ದ ಪಣಿಕ್ಕರ್ ವಿದ್ಯಾರ್ಥಿಗಳ ಅಭಿವ್ಯಕ್ತಿ ಪ್ರಕ್ರಿಯೆಯ ಅನುಭವಗಳ ಅಭಿವ್ಯಕ್ತಿಗೆ ಪೂರಕ ವಾತಾವರಣವನ್ನು ನಿರ್ಮಿಸಿಕೊಡುತ್ತಿದ್ದರು. ಇಂಥ ವಾತಾವರಣದಲ್ಲಿ ವಾಸುದೇವ್ ತಮ್ಮ ಅನುಭವಕ್ಕೆ ಬಂದ ಸುತ್ತಲಿನ ಎಲ್ಲವನ್ನು ತಮ್ಮದೇ ಆದ ರೀತಿಯಲ್ಲಿ ಚಿತ್ರಿಸಲು ಸಾಧ್ಯವಾಯಿತು.[5] ಈ ನಡುವೆ ಸಹಜವಾಗಿಯೇ ತಮ್ಮ ಮೂವರು ಕಲಾ ಶಿಕ್ಷಕರಾದ ಪಣಿಕ್ಕರ್, ಮುನುಸ್ವಾಮಿ, ಸಂತಾನರಾಜಾ ರವರುಗಳೇ ಅಲ್ಲದೆ ವಾಸುದೇವ್ ಫ್ರಾನ್ಸಿಸ್ ನ್ಯೂಟನ್ ಸೌಝಾ, ಡೆ-ಕೂನಿಂಗ್, ರೋಥ್ಕೋ, ಕ್ಲೆ ಮತ್ತು ಮ್ಯಾತಿಸ್ ರವರುಗಳಿಂದ ಸಾಕಷ್ಟು ಪ್ರಭಾವಗೊಂಡಿದ್ದಾರೆ. ವಾಸುದೇವ್ರ ತಾಮ್ರದ ಉಬ್ಬು ಶಿಲ್ಪಗಳೇ ಅಲ್ಲದೆ ಅವರ ರೇಖೆಗಳಲ್ಲಿ ಶಿಲ್ಪಗಳೇ ಅಲ್ಲದೆ ಅವರ ರೇಖೆಗಳಲ್ಲಿ ಹಾಗೂ ವರ್ಣಚಿತ್ರಗಳಲ್ಲಿನ ವರ್ಣಗಳ ಸಂಯೋಜನೆ ಮತ್ತು ನಿರ್ವಹಣೆಗಳಲ್ಲಿ ಈ ಪ್ರಭಾವಗಳನ್ನು ಗುರುತಿಸಬಹುದು.

ಡಿ.ಪಿ. ರಾಯ್ ಚೌದುರಿಯವರ ನಂತರ ಮದರಾಸು ಸರ್ಕಾರಿ ಆರ್ಟ್ ಅಂಡ್ ಕ್ರಾಫ್ಟ್ಸ್ ಕಾಲೇಜಿನ ಆಡಳಿತವನ್ನು ಕೈಗೆತ್ತಿಕೊಂಡ ಪಣಿಕ್ಕರ್, ಶಿಲ್ಪಿಯಾಗಿ ರಾಷ್ಟ್ರೀಯ ಪ್ರಾಮುಖ್ಯತೆಗಳಿಸಿದ್ದ ರಾಯ್ ಚೌದುರಿಯವರ ಸ್ಥಾನವನ್ನು ಸಮರ್ಥವಾಗಿ ತುಂಬಲು, ಪ್ರಾರಂಭದಲ್ಲಿ ಮಾನಸಿಕ ಪದ್ಧತಿಯನ್ನು ಮಾಡಿಕೊಳ್ಳುತ್ತ ವಿಶಿಷ್ಟ ರೀತಿಯಲ್ಲಿ ಮುನ್ನಡೆದ ಫಣಿಕಲ್, ಕ್ರಮೇಣ ತಮ್ಮ ವ್ಯಕ್ತಿತ್ವದ ಚುಂಬಕತೆಯಿಂದ ಕಾಲೇಜನ್ನು ಆಕರ್ಷಿಸಿದರು.

---

4. Homage and tribute to late K.C.S. Panicker -1998 ಮದರಾಸಿನ ಕಲಾಪ್ರದರ್ಶನವೊಂದರ ಕ್ಯಾಟಲಾಗಿನಲ್ಲಿ
5. 1992ರ ವಾಸುದೇವ್‌ರ INSCAPE, ವರ್ಣ ಚಿತ್ರಗಳ ಸಾಕ್ಷಿ ಗ್ಯಾಲರಿಯ ಪ್ರದರ್ಶನದ ಕ್ಯಾಟಲಾಗಿನಲ್ಲಿ ಎಸ್. ಕೃಷ್ಣನ್‌ರವರ ಬರಹ ಗಮನಿಸಿ.

ಪಶ್ಚಿಮದ ಪ್ರಭಾವದಿಂದ ಹೊರಬಂದು ಭಾರತೀಯ ವಸ್ತು – ಆಶಯ ನಿರ್ವಹಣೆಗಳನ್ನು ಕಂಡುಕೊಳ್ಳಲು ಅವರು ತೊಡಗಿದ್ದ ಕಾಲವದು.

ಕಲಾ ಸೃಷ್ಟಿಯಷ್ಟೇ ಕಲಾಶಿಕ್ಷಕ ವಿದ್ಯಾರ್ಥಿಗಳ ನಡುವೆ ಕಲೆಯ ಕುರಿತ ಪರಸ್ಪರ ಚರ್ಚೆ ವಿಚಾರವಿನಿಮಯಗಳು ಅಗತ್ಯವೆಂದು ಪಣಿಕ್ಕರ್ ಭಾವಿಸಿದ್ದರು.

ವಿದ್ಯಾರ್ಥಿಗಳನ್ನು ಅವರ ಕಲಾಸೃಷ್ಟಿಯ ದೃಷ್ಟಿ, ಪ್ರಕ್ರಿಯೆ, ಹಾಗೂ ಕಲಾಸೃಷ್ಟಿಯಾಗುವಾಗ ಉಂಟಾಗುವ ಸಮಸ್ಯೆಗಳ ಕುರಿತು ಪ್ರಸ್ತಾಪ ಮಾಡುವಂತೆ ಪಣಿಕ್ಕರ್ ಉತ್ತೇಜಿಸುತ್ತಿದ್ದರು. "He never made us feel he was a teacher" ಎನ್ನುವ ವಾಸುದೇವ್, ಸಂದರ್ಶನವೊಂದರಲ್ಲಿ "He was friend, philospher, and guide to me. His studio was always open and I could talk to him about any thing. It was good to discuss our work every day with a teacher of his standing. he'd talk about his own painting and how the arrangement inmy painting was helping him with his ! It was as if both of us were learning at the same time. He gave us the freedom to work as and when we wanted"[6] ಎಂದೂ ಉದ್ಗರಿಸುತ್ತಾರೆ. ಆಸಕ್ತವಿದ್ಯಾರ್ಥಿಗಳ ಇಂಥ ಅತ್ಯಂತ ಆಪ್ತ ಸಾನ್ನಿಧ್ಯ - ಸಂಭಾಷಣೆಗಳು ಚೋಳ ಮಂಡಲ ಕಲಾ ಗ್ರಾಮವನ್ನು ಹುಟ್ಟು ಹಾಕುವ ಹಿನ್ನೆಲೆಯಲ್ಲಿ ಹೆಚ್ಚು ಪ್ರಭಾವ ಬೀರಿದವು. ಕಲಾವಿದರ ನಡುವೆಯ ಪರಸ್ಪರ ಸಹಕಾರದ ಆದಾರದ ಮೇಲೆ ಹುಟ್ಟಿದ ಚೋಳಮಂಡಲ ಕಲಾಗ್ರಾಮಕ್ಕೆ ಪಣಿಕರ್ ರೊಂದಿಗೆ ವಾಸುದೇವ್‌ರವರೂ founding fathers ಗಳಲ್ಲಿ ಒಬ್ಬರಾದದ್ದು ಸಹಜವಾಗಿಯೇ ಇದೆ.

ಹೀಗೆ ಚೋಳಮಂಡಲದಲ್ಲಿ ಕಲಾವಿದರ ಸಂಘಟನೆ ಹಾಗೂ ಸುಂದರವಾಗಿ ಬದುಕುವ ಉದ್ದೇಶ ಸಾಧಿಸಲು ಕಲೆಯನ್ನು ಕರಕುಶಲತೆಯನ್ನು ಕಸಿಮಾಡಿ ವಿಶಿಷ್ಟವಾಗಿ ಸಂಯೋಜಿಸುವ ಪ್ರಯತ್ನಗಳಲ್ಲಿ ತಮ್ಮ ಕಲಾಸೃಷ್ಟಿಯ ನಡುವೆ ವಾಸುದೇವ್ ತೊಡಗಿದರು. ಕೆಲವು ಅನಿವಾರ್ಯ, ಒತ್ತಡದ ಸಂದರ್ಭಗಳ ಹಿನ್ನೆಲೆಯಲ್ಲಿ ವಾಸುದೇವ್ ಕುಶಲ ಕಲೆಯನ್ನು ಅವಲಂಭಿಸಬೇಕಾದ ಪರಿಸ್ಥಿತಿಗಳನ್ನೂ ಯಶಸ್ವಿಯಾಗಿ ಎದುರಿಸಿದರು.

೧೯೬೭ರಲ್ಲಿ ಅವರ procession ಶೀರ್ಷಿಕೆಯ ಕಾರ್ಡ್ ಬೋರ್ಡ್ ಅವಕಾಶದಲ್ಲಿ (space) ಚಿತ್ರಿಸಿದ ಕಲಾಕೃತಿಗೆ ದೆಹಲಿಯ ಕೇಂದ್ರಲಲಿತ ಕಲಾ ಅಕಾಡೆಮಿಯ ಪ್ರಶಸ್ತಿ ಪ್ರಕಟವಾಯಿತು. ಮನದಾಳದಲ್ಲಿ ಹುದುಗಿದ್ದ ಬಾಲ್ಯದ ಸಂವೇದನೆ (child sensibility) ಅವರನ್ನು ೬೦ರ ದಶಕದಲ್ಲಿ ಹಾಗೂ ಆ ನಂತರವೂ ಹೆಚ್ಚು ಕಾಡಿದ್ದುಂಟು. ಮೈಸೂರಿನಲ್ಲಿ ಹುಟ್ಟಿ ಬೆಳೆದ, ಬಾಲ್ಯದಲ್ಲಿ ಅಲ್ಲಿನ ದಸರಾ ಮೆರವಣಿಗೆ, ಹಾಗೆಯೇ ಮನೆಯ ಹತ್ತಿರ ಇದ್ದ ಆನೆ ಕರೋಟಿ ಅವರಲ್ಲಿ ಹಾಸು-ಹೊಕ್ಕು ಆನೆಯ ರೂಪಕಲ್ಪನೆಯ ವೈಭವವನ್ನು ತುಂಬಿದ್ದವು. ೧೯೯೪ರ ಅಂತಿಮ ದಿನಗಳಲ್ಲೂ ವಾಸುದೇವ್‌ರ ಹಲವಾರು ಕಲಾಕೃತಿಗಳಲ್ಲಿ ಈ ಆನೆಯ ರೇಖೆ-ರೂಪಾಂಶಗಳು ವಿಶಿಷ್ಟವಾಗಿ ಕಾಣಿಸಿಕೊಂಡಿವೆ.

ಚೋಳ ಮಂಡಲದ ದಿನಗಳಲ್ಲಿ ಮದರಾಸಿನಲ್ಲಿ ವಾಸುದೇವ್ ನಾಟಕಕಾರ ಗಿರೀಶ್ ಕಾರ್ನಾಡ್‌ರನ್ನು ಭೇಟಿ ಮಾಡಿದ್ದು ಅವರ ಗ್ರಹಿಕೆ ಹಾಗೂ ಅಭಿವ್ಯಕ್ತಿಗಳಿಗೆ ಹೊಸ ಆಯಾಮಗಳನ್ನು

---

6. ವಾಸುದೇವ್‌ರ INSCAPE, ಶೀರ್ಷಿಕೆಯ ಸಾಕ್ಷಿಗ್ಯಾಲರಿಯ ಪ್ರದರ್ಶನ ಕೆಟಲಾಗಿನಲ್ಲಿ ಎಸ್. ಕೃಷ್ಣನ್ ರವರ ಬರಹದಿಂದ ಉಲ್ಲೇಖಿಸಲಾಗಿದೆ.

ನೀಡಿತು. ಆಕ್ಸ್‌ಫೋರ್ಡ್ ವಿಶ್ವವಿದ್ಯಾಲಯದ ಪ್ರೆಸ್‌ನಲ್ಲಿ ಕೆಲಸ ಮಾಡುತ್ತಿದ್ದ ಕಾರ್ನಾಡ್ ಆಗಷ್ಟೇ ತುಘಲಕ್ ನಾಟಕವನ್ನು ಪೂರ್ಣಗೊಳಿಸಿದ್ದರು. ಅವರೊಂದಿಗಿನ ಮಾತುಕತೆಗಳ ಪ್ರಭಾವದಿಂದ ವಾಸುದೇವ್ ಕನ್ನಡದ ಅತ್ಯುತ್ತಮ ಸಾಹಿತಿಗಳ ಸಾಹಿತ್ಯ ಕೃತಿಗಳನ್ನು ಓದುವ-ಚರ್ಚಿಸುವ ಅವಕಾಶಗಳನ್ನು ಮಾಡಿಕೊಂಡರು. ಯು. ಆರ್. ಅನಂತ ಮೂರ್ತಿಯವರ ಸಂಸ್ಕಾರ ಕಾದಂಬರಿಯ ಅಧ್ಯಯನ ಮತ್ತು ಗಿರೀಶ್‌ರೊಂದಿಗೆ ನಡೆಸಿದ ಚರ್ಚೆಗಳ ಫಲವಾಗಿ ಅದು ಚಲನ ಚಿತ್ರವಾಗಿ ಮೂಡಿಬರಬಹುದಾದ ಸಾಧ್ಯತೆಗಳು ಇಬ್ಬರಿಗೂ ಕಂಡಿತು. ಈ ಪರಸ್ಪರ ವಿಚಾರ ವಿನಿಮಯ ಮಿತ್ರರಾದ ಲಕ್ಷ್ಮೀಕೃಷ್ಣಮೂರ್ತಿ, ಅಮ್ಮುಮ್ಯಾಥ್ಯೂ ಮತ್ತಿತರರೊಂದಿಗೆ ಮುಂದುವರೆದು ಮೂರು ವರ್ಷಗಳನಂತರ ಚಿತ್ರದ ನಿರ್ಮಾಣ ಪ್ರಾರಂಭವಾಗಿ ಪೂರ್ಣಗೊಂಡಿತು.

ವಾಸುದೇವ್ ಈ ಚಿತ್ರಕ್ಕೆ ಕಲಾ ನಿರ್ದೇಶಕರಾಗಿ ಕೆಲಸಮಾಡಿದರು. ಆ ವರೆಗಿನ ಕನ್ನಡ ಚಲನ ಚಿತ್ರ ಸಂಸ್ಕೃತಿಯ ಭಿತ್ತಿಪತ್ರಗಳಿಗಿಂತ ವಿಭಿನ್ನವಾಗಿದ್ದ ಭಿತ್ತಿ ಪತ್ರಗಳ ಸೃಷ್ಟಿಗೆ ಅವರು ಕಾರಣರಾದರು.[7]

ಪಿ. ಲಂಕೇಶರ 'ಪಲ್ಲವಿ' ಚಿತ್ರಕ್ಕೆ ಭಿತ್ತಿಪತ್ರ, ಟೈಟಲ್ ಕಾರ್ಡ್‌ಗಳೂ ವಾಸುದೇವ್ ರಿಂದ ಮೂಡಿಬಂದವು. 'ಸಂಸ್ಕಾರ'ದ ಸೃಷ್ಟಿಯ ಸಂದರ್ಭದಲ್ಲಿ ವೈ.ಎನ್.ಕೆ. ನೀಡಿದ ಬೌದ್ಧಿಕ ನೆರವನ್ನು ವಾಸುದೇವ್ ನೆನೆಯುತ್ತಾರೆ. ಹಾಗೆಯೇ ಸಂಸ್ಕಾರದ ಕಲಾನಿರ್ದೇಶನವನ್ನು ಸತ್ಯಜಿತ್‌ರೇ ಮೆಚ್ಚಿಕೊಂಡದನ್ನು ಸಂತಸದಿಂದ ಅವರು ನೆನಪು ಮಾಡಿಕೊಳ್ಳುತ್ತಾರೆ. ಗಿರೀಶ್ ಕಾರ್ನಾಡ್ ರೊಂದಿಗೆ ಬೆಳೆದಸ್ನೇಹ ಈ ಮೊದಲೇ ಹೇಳಿರುವಂತೆ ವಾಸುದೇವ್ ಉತ್ತರ ಕರ್ನಾಟಕದ ಪ್ರವಾಸ ಮಾಡುವಂತಾಗಿ, ಧಾರವಾಡದ ವಿದ್ಯಾವರ್ಧಕ ಸಂಘದಲ್ಲಿ ಅವರ ಕಲಾಕೃತಿಗಳ ಪ್ರದರ್ಶನ ಏರ್ಪಡಿಸುವಂತಾಯಿತು. ಕಲಾಪ್ರದರ್ಶನಕ್ಕೆ ಆಗಮಿಸಿದ್ದ ಡಾ|| ದ.ರಾ.ಬೇಂದ್ರೆ ವಾಸುದೇವ್‌ರ ಕಲಾಕೃತಿಗಳನ್ನು ಮೆಚ್ಚಿಕೊಂಡರು. ಅದೇ ಸಂದರ್ಭದಲ್ಲಿ ಮನೋಹರ ಗ್ರಂಥಮಾಲೆಯ ಜಿ.ಬಿ. ಜೋಷಿ, ವಿಮರ್ಶಕರಾದ ಕೀರ್ತಿನಾಥ 'ಕುರ್ತುಕೋಟಿಯವರುಗಳ ಪರಿಚಯವೂ ಆಯಿತು. ಧಾರವಾಡಕ್ಕೆ ೧೯೬೮ರಲ್ಲಿ ವಾಸುದೇವ್ ಭೇಟಿ ನೀಡಿದ ಸಂದರ್ಭದಲ್ಲಿ ಮನೋಹರ ಗ್ರಂಥಮಾಲೆಯ 'ಬೇಂದ್ರೆ ಕಾವ್ಯ' ಕಾರ್ಯಕ್ರಮದಲ್ಲಿಯೂ ಅವರು ಪಾಲ್ಗೊಂಡರು. [8] ಬೇಂದ್ರೆಯವರ ಕಾವ್ಯದ ಭಾಷೆ ಭಾವಗಳ ಒಳನೋಟಗಳನ್ನು ಕುರ್ತುಕೋಟಿಯವರಿಂದ ಪಡೆದ ವಾಸುದೇವ್ ಮುಂದೆ ಬೇಂದ್ರೆಯವರ ಕಾವ್ಯದ ಒಳ ಹೊರಗುಗಳನ್ನು, ಭಾಷೆ ಭಾವಗಳ ವ್ಯಾಪ್ತಿಯನ್ನು ಆ ಕವನಗಳ ಆಳ-ಅಧ್ಯಯನಗಳಿಂದ ಗ್ರಹಿಸಿದರು. ಬೇಂದ್ರೆಯವರ –

"ಕಲ್ಪವೃಕ್ಷ ಬೃಂದಾವನಂಗಳಲ್ಲಿ
ಹೇಗೋ ಹೊಕ್ಕು ಬಂದೆ
ಅಲ್ಲ ಎಚ್ಚರವು
ಅಲ್ಲ ನಿದ್ರೆಯೂ
ಏನೋ ಯೋಗದಿಂದೆ"

---

7. ೧೯೬೯ ರಲ್ಲಿ 'ಸಂಸ್ಕಾರ', ೧೯೭೧ರಲ್ಲಿ 'ವಂಶವೃಕ್ಷ' ಚಲನ ಚಿತ್ರಗಳಿಗೆ ಕಲಾನಿರ್ದೇಶನ ನೀಡಿದ ನಂತರ, ವಾಸುದೇವ್,ಗಿರೀಶ್ ಕಾರ್ನಾಡ್ ನಿರ್ದೇಶನದ 'ಕಾಡು', 'ಒಂದಾನೊಂದು ಕಾಲದಲ್ಲಿ' ಚಲನ ಚಿತ್ರಗಳಿಗೆ ಟೈಟಲ್ ಕಾರ್ಡ್ ಮತ್ತು ಭಿತ್ತಿ ಪತ್ರಗಳನ್ನು ಸಿದ್ಧಪಡಿಸಿಕೊಟ್ಟರು.

8. ಎಸ್.ಜಿ. ವಾಸುದೇವ್ ರ ಕಲೆ. ಕೆ.ವಿ. ಸುಬ್ರಹ್ಮಣ್ಯಂ, ಅನ್ವೇಷಣೆ, ಸಂಚಿಕೆ ೨೪–೨೫, ಸಂಪುಟ ೩, ಪುಟ–೨

ಕವನದ ವಸ್ತು-ಆಶಯಗಳಿಂದ ಪ್ರಭಾವಿಸಲ್‌ಪಟ್ಟ ಅವರು ಕಲ್ಪವೃಕ್ಷ ಮತ್ತು ವೃಂದಾವನಗಳನ್ನು ವಸ್ತುವಾಗಿಸಿ ಹಲವಾರು ಕಲಾಕೃತಿಗಳನ್ನು ರಚಿಸಿದರು. ಆ ನೆನಪು ಪುನಃ ಕಾಡಿ ೧೯೮೮ ರ ರೇಖಾಚಿತ್ರವೊಂದರಲ್ಲಿಯೂ ಮೂಡಿಬಂದಿತ್ತು.[9]

ಹೀಗೆ ಸಾಹಿತ್ಯ - ಸಾಹಿತಿಗಳ ಸ್ನೇಹ, ಹಲವು ಸಾಹಿತ್ಯ ಕೃತಿಗಳಿಗೆ ವಾಸುದೇವ್ ಮುಖ ಪುಟ ರೂಪಿಸಿಕೊಡುವಂತಾಯಿತು. ಅನಂತ ಮೂರ್ತಿಯವರ 'ಸಂಸ್ಕಾರ', ಕೃಷ್ಣ ಆಲನಹಳ್ಳಿಯವರ 'ಕಾಡು', ಗಿರೀಶ್ ಕಾರ್ನಾಡ್‌ರವರ 'ತಲೆದಂಡ' ಅಡಿಗರ 'ಭೂಮಿ ಗೀತ' ಎ.ಕೆ. ರಾಮಾನಜನ್‌ರ 'ಹೊಕ್ಕುಳಲ್ಲಿ ಹೂವಿಲ್ಲ', 'ಕುಂಟೋಬಿಲ್ಲೆ', ಶೂದ್ರ ಶ್ರೀನಿವಾಸ್ ಸಂಪಾದಿಸಿ, ಪ್ರಕಟಿಸಿರುವ 'ಸಾಹಿತ್ಯದಲ್ಲಿ ಶ್ರೇಷ್ಠತೆ ಒಂದು ಸಂವಾದ' (೧೯೯೦), ಮತ್ತು ಮನೋಹರ ಗ್ರಂಥ ಮಾಲೆಯ ಹಲವಾರು ಕೃತಿಗಳು ಹಾಗೂ ಇನ್ನೂ ಇತರರ ಹಲವು ಸಾಹಿತ್ಯ ಕೃತಿಗಳ ಮುಖ ಪುಟಗಳನ್ನು ಹೆಸರಿಸಬಹುದು.

ಜೋಳಮಂಡಲ ಪರಿಸರವು ಅರ್‌ನಾವಾಝ್-ವಾಸುದೇವ್- ಕಲೆ-ಸಾಹಿತ್ಯ, ಸಂಗೀತ - ನೃತ್ಯ, ನಾಟಕ, ತತ್ವಶಾಸ್ತ್ರ ಇತ್ಯಾದಿಗಳಿಂದ ಪಕ್ಕದ ಸಮುದ್ರದ ಅಲೆಗಳ ಉಬ್ಬರ - ಇಳಿತಗಳ ಶಬ್ದಕ್ಕಿಂತಲೂ ಹೆಚ್ಚು ಭೋರ್ಗರೆಯುತ್ತಿದ್ದ ದೃಶ್ಯ ಕಣ್ಣಮುಂದೆ ಹಾದುಹೋಗುತ್ತದೆ. ಚಿತ್ರ ಶಿಲ್ಪ ಕಲೆಗಳು ಇನ್ನಿತರ ಲಲಿತ ಕಲಾಮಾಧ್ಯಗಳೊಂದಿಗೆ ಸಂಪರ್ಕ ಹೊಂದಿ ಪರಸ್ಪರವಾಗುವುದು ಅಗತ್ಯವೆಂದು ನಂಬಿದ್ದ ವಾಸುದೇವ್ ಮತ್ತು ಅವರ ಮಿತ್ರರ ಪ್ರಯತ್ನದಿಂದ ಬಾಲಸರಸ್ವತಿ, ಚಿತ್ರಾ ವಿಶ್ವೇಶ್ವರನ್, ಲೀಲಾ ಸ್ಯಾಮಸನ್, ರೇವತಿ, ಧನಂಜಯನ್ ದಂಪತಿಗಳು ಮೊದಲಾದವರ ನೃತ್ಯ, ಎಂ.ಡಿ. ರಾಮನಾಥನ್, ಬಾಲ ಮುರಳೀ ಕೃಷ್ಣ, ರಾಜೀವ್ ತಾರಾನಾಥ್, ಮೊದಲಾದವರ ಸಂಗೀತ, ಗಿರೀಶ್ ಕಾರ್ನಾಡ್, ಸ್ನೇಹಲತಾ ರೆಡ್ಡಿ, ಭಾಗೀರಥಿ, ಅಮ್ಯೂಮ್ಯಾಥ್ಯೂ, ನಾರಾಯಣ ರಂಥ ನಟರ ನಾಟಕೀಯ ಅಭಿನಯ, ನಿಝಾಮ್ ಎಝಿಕಲ್, ಎ.ಕೆ. ರಾಮಾನುಜನ್ ಮೊದಲಾದವರ ಕಾವ್ಯದ ಹೊಳಹುಗಳನ್ನು ಅನುಭವಿಸುವುದು ಅಲ್ಲಿನ ಕಲಾವಿದರಿಗೆ ಸಾಧ್ಯವಾಯಿತು. ಈ ಕಾರ್ಯಕ್ರಮಗಳಿಗೆ ಆಹ್ವಾನಿಕರಾಗುತ್ತಿದ್ದ ಮದರಾಸಿನ ಕಲಾಭಿಮಾನಿ ಜನರಿಗಂತೂ ಹಬ್ಬವೇ ಸರಿ. ಈ ಎಲ್ಲದರ ನಡುವೆ ೧೯೭೧ ರಲ್ಲಿ ಸಹಪಾಠಿ ಅರ್ನಾವಾಝ್ ರನ್ನು ವಾಸುದೇವ್ ವಿವಾಹವಾದರು.

ಮದರಾಸು ಕಲಾ ಶಾಲೆಯಲ್ಲಿ ಪಣಿಕ್ಕರ್ ರವರ ಬಳಿ ಕಲಿಯುತ್ತಿದ್ದಾಗ ಅರ್ನಾವಾಝ್‌ರನ್ನು ಸಂಧಿಸಿದ ವಾಸುದೇವ್, ಅವರ ಸಹಜ ರೇಖಾ ಸೃಷ್ಟಿ ಪ್ರೌಢಿಮೆಗೆ ಬೆರಗುಗೊಂಡಿದ್ದರು. ಅವರಿಬ್ಬರ ಪರಸ್ಪರ ಆಕರ್ಷಣೆ ಕಾಲೇಜು ಅಭ್ಯಾಸಮುಗಿದ ಕೂಡಲೇ ವಿವಾಹವಾಗುವಂತೆ ಮಾಡಿತು, ಕಲಾ ಸೃಷ್ಟಿಯಲ್ಲೂ ಮುಂದೆ ಪರಸ್ಪರರಾದರು. ಪಣಿಕರ್‌ರಂತೆ ನಿರ್ದಿಷ್ಟ ದೃಷ್ಟಿ ದೃಢ ಮನಸ್ಸುಗಳ ಅರ್ನಾವಾಝ್ ತಮಗೆ ಅನ್ನಿಸಿದ್ದನ್ನು ಅಭಿವ್ಯಕ್ತಿಸುತ್ತಿದ್ದವರು. ಮದರಾಸಿನ ಮಧ್ಯಮ ವರ್ಗದ ಪಾರ್ಸಿ ಮನೆತನದಲ್ಲಿ ಹುಟ್ಟಿದ ಆಕೆ, ತನ್ನ ಕುಟುಂಬದ ಸಂಪ್ರದಾಯಗಳ ವಿರುದ್ಧ ಪ್ರತಿಭಟಿಸಿ ಕಲಾ ಶಾಲೆಯಲ್ಲಿ ಕಾಣಿಸಿಕೊಂಡಿದ್ದವರು. ಪಾರ್ಸಿ ಹಿಂದೂ ಧರ್ಮಗಳ ಸಮ್ಮಿಲನದಂಥ ಎರಡೂ ಕುಟುಂಬಗಳಲ್ಲಿ ಸುಲಭವಾಗಿ ಒಪ್ಪಿತವಾಗದೆ, ಕಾಲಕ್ರಮೇಣ ಒಪ್ಪಿಕೊಳ್ಳುವಂತಾಯಿತು ! ಮದರಾಸ್ ಮಹಾನಗರದ ವಿಕ್ಷಿಪ್ತ ಗಡಿಬಿಡಿಯಲ್ಲಿ ಬದುಕನ್ನು ಕಟ್ಟುವುದು, ಕಲಾಕೃತಿಗಳನ್ನು ಸೃಷ್ಟಿಸುವಷ್ಟೇ ಶ್ರಮದಾಯಕ ಆವೇಳೆಗೆ ಫ್ರಾನ್ಸ್‌ಗೆ ಪಯಣಿಸಿದ್ದ ಕಲಾವಿದ, ಗೆಳೆಯ ವಿಶ್ವನಾಥನ್ ಮನೆಯನ್ನು ತಮ್ಮ ಕೌಟುಂಬಿಕ ಬದುಕಿಗಾಗಿ ಹೊಸ ದಂಪತಿಗಳು

9. ನೋಡಿ ಅನ್ವೇಷಣೆ : ಸಂಪುಟ ೩, ಸಂಚಿಕೆ ೨೪-೨೫ ರ ಮುಖಪುಟ.

ಆಯ್ಕೆಮಾಡಿಕೊಂಡರು ಅಮೆರಿಕದ ಗ್ಯಾಲರಿ ಮಾಲೀಕರೊಬ್ಬರು ವಾಸುದೇವ್‌ರ ಕಲಾಕೃತಿಗಳನ್ನುಕೊಂಡ ಹಣ ಹಾಗೂ ಬ್ಯಾಂಕು ಮತ್ತಿತರ ಮೂಲಗಳಿಂದ ಪಡೆದ ಸಾಲದ ಜೊತೆಗೇ ಅರ್ನಾವಾಝ್ ಉಳಿಸಿಟ್ಟಿದ್ದ ಹಣ ಇವೆಲ್ಲವುಗಳಿಂದ ಪೊನ್ನಪ್ಪ[10] ವಿನ್ಯಾಸಗೊಳಿಸಿ ನಿರ್ಮಿಸಿಕೊಟ್ಟ ಸ್ಟುಡಿಯೋ ಹಾಗೂ ಮನೆಯಲ್ಲಿ, ವಾಸುದೇವ್ ಸ್ವಂತ ಮನೆಯ ಸಾಕಾರದಲ್ಲಿ ಸಂತಸಪಟ್ಟದ್ದುಂಟು.

ಅರ್ನಾವಾಝ್ ರೊಂದಿಗಿನದಿನಗಳು ವಾಸುದೇವ್‌ರ ಬದುಕಿಗೆ ವಿಶಿಷ್ಟ ಆಯಾಮವನ್ನು ತಂದಿತ್ತವು, ಅವರು ತಮ್ಮನ್ನ ಚೋಳ ಮಂಡಲದ ಚಟುವಟಿಕೆಗಳ ಜೊತೆ ಜೊತೆಗೆ ಕಲಾಸೃಷ್ಟಿಯಲ್ಲೂ ತೀವ್ರತೆಯಿಂದ ತೊಡಗಿಸಿಕೊಂಡರು.

ಅರ್ನಾವಾಝ್ ತಮ್ಮ ಮಗು ಭರಣಿಯನ್ನು ಪುಟ್ಟ ತಳ್ಳುಗಾಡಿಯಲ್ಲಿ ನೂಕುತ್ತ ೧೯೮೦ರ ಕಲಾಮೇಳದಲ್ಲಿ [11] ವಾಸುದೇವ್ ರೊಂದಿಗೆ ಭಾಗವಹಿಸಿದ್ದು, ನಂತರ ಲಲಿತಕಲಾ ಅಕೆಡೆಮಿಯ ಕಲಾಶಿಬಿರದಲ್ಲಿ[12] ಹೆಬ್ಬಾರ್ ಅರ್ನಾವಾಝ್ ರ ಪುಟ್ಟ ಭಾವಚಿತ್ರ ಸೃಷ್ಟಿಸಿದ್ದು ನನಗಿನ್ನೂ ನೆನಪಿದೆ.

ಹಣೆಯಲ್ಲಿ, ಆಗಸದಲ್ಲಿ ಮಿಂಚುವ ಸೂರ್ಯನಂಥ ಅಗಲವಾದ ಕುಂಕುಮ ಇಟ್ಟುಕೊಳ್ಳುತ್ತಿದ್ದ ಅರ್ನಾವಾಝ್ ಕ್ಯಾನ್ಸರಿನ ತೀವ್ರ ನೋವಿಗೆ ತುತ್ತಾಗಿ ವಾಸುದೇವರನ್ನು ಪಣಿಕ್ಕರ್ ಬಿಟ್ಟುಹೋದಂತೆಯೇ ಬಿಟ್ಟು ಹೋದರು.

ಈ ಎಲ್ಲದರ ನಡುವೆ ಕಲಾ ಸೃಷ್ಟಿಯಲ್ಲಿ ತೊಡಗಿ ನೋವನ್ನು ಮರೆಯಲು ಪ್ರಯತ್ನಿಸಿದ ವಾಸುದೇವ್ ಚೋಳ ಮಂಡಳ ಹಾಗೂ ಬೆಂಗಳೂರುಗಳ ನಡುವೆ ಓಡಾಡುತ್ತಿದ್ದರು. ಅರ್ನಾವಾಝ್ ರವರ ಅಗಲಿಕೆಯನಂತರ ಚೋಳಮಂಡಳದಿಂದ ಸ್ವಲ್ಪಮಟ್ಟಿಗೆ ದೂರವಾಗಿ ಬೆಂಗಳೂರಿನಲ್ಲಿ ಹೆಚ್ಚು ಉಳಿದುಕೊಳ್ಳುತ್ತಿದ್ದವರು, ಮಗ ಭರಣಿ ಬೆಳೆದಂತೆಲ್ಲ ತಾವೊಬ್ಬರೇ ಆಗಿ ಅರ್ನಾವಾಝ್ ಪ್ರೀತಿಯ ಟಿಸಿಲನ್ನು ದಿ. ಜಿಡ್ಡು ಕೃಷ್ಣಮೂರ್ತಿಯವರಿಂದ ಸ್ಥಾಪಿಸಿಲ್ಪಟ್ಟ ಬೆಂಗಳೂರಿನ ಹೊರ ವಲಯದ ಸುಂದರ ಪ್ರಕೃತಿಯ ವ್ಯಾಲಿ ಶಾಲೆಯಲ್ಲಿ, ಬದುಕಿನ ಮೂಲ ಪಾಠಗಳನ್ನು ಕಲಿಯಲು ಬಿಟ್ಟು, ತಾವೂ ಕಲಾ ಸೃಷ್ಟಿಯಲ್ಲಿ ತೊಡಗಿಕೊಂಡರು. ಅರ್ನಾವಾಝ್ ರ ನೆನಪುಗಳ ಕಾಡುವಿಕೆಯಿಂದ ಪಾರಾಗುವಂತೆ ಆಸಂದರ್ಭದ ಕಲಾಸೃಷ್ಟಿಯ ತೀವ್ರತೆಯಿದ್ದಿತು.

ರೇಖೆ, ಬಣ್ಣ-ರೂಪ, ಮೈವಳಿಕೆಗಳಲ್ಲಿ, ಹಲವು ತಂತ್ರಗಳಲ್ಲಿ ಮನುಷ್ಯರ ಸಂಬಂಧಗಳ ಗಾಢತೆಯನ್ನು ಅಗಲಿಕೆ ಮತ್ತು ಜೊತೆಯಾಗುವಿಕೆಗಳ, ವೈವಿಧ್ಯ - ವೈರುಧ್ಯಗಳನ್ನು, ಬದುಕಿನ ಎರಡು ಪ್ರಮುಖ ಶಕ್ತಿಗಳಾದ, ಸತ್ಯಗಳಾದ ಸಾವು ಮತ್ತು ಕಾಮಗಳನ್ನು, ಅವುಗಳ ಹಲವು ಆಯಾಮಗಳನ್ನು ಸೂಕ್ಷ್ಮವಾಗಿ ಅವರು ತಮ್ಮ ಕಲಾ ಸೃಷ್ಟಿಯಲ್ಲಿ ಅನ್ವೇಷಿಸಲಾರಂಭಿಸಿದ್ದರು.

---

10. ಆ ಸಂದರ್ಭದಲ್ಲಿ ಮದರಾಸಿನ ವಾಸ್ತು ಶಿಲ್ಪ ಶಾಲೆಯಲ್ಲಿ ಕಲಿಯುತ್ತಿದ್ದವರು ನಂತರ, ಬೆಂಗಳೂರಿನಲ್ಲಿ ನೆಲಸಿ ಪ್ರಸಿದ್ಧ ವ್ಯಂಗ್ಯ ಚಿತ್ರಕಾರರಲ್ಲಿ ಒಬ್ಬರೆನಿಸಿದರು.

11. ೧೯೮೦; ಹೆಬ್ಬಾರರು ಸ್ವಲ್ಪ ಹಿಂದೆಯಷ್ಟೇ ರಾಜ್ಯ ಲಲಿತಕಲಾ ಅಕಾಡೆಮಿಗೆಅಧ್ಯಕ್ಷರಾಗಿ, ನಮ್ಮ ಕಲೆಗೆ ಸಮಕಾಲೀನ ಹೊಳಹುಗಳನ್ನು ತಂದಿತ್ತಹಿನ್ನೆಲೆ ಶಾಂತಿನಿಕೇತನ, ಬರೋಡಾಗಳಲ್ಲಿಯಂತೆ ಕಲಾ ಉತ್ಸವಗಳನ್ನು ಬೆಂಗಳೂರಿನಲ್ಲಿ ನಡೆಸಲು ಅವರಿಂದ ಸೂಚನೆ ಬಂದ ಕಾರಣ ಮೊದಲನೆಯ ಕರ್ನಾಟಕ ಕಲಾಮೇಳ ವೆಂಕಟಪ್ಪ ಆರ್ಟ್ ಗ್ಯಾಲರಿಯಲ್ಲಿ ಎಸ್.ಜಿ. ವಾಸುದೇವ್, ಜಿ.ಎಸ್. ಶೆಣೈ ಮೊದಲಾದವರಿಂದ ನಡೆಯಿತು.

ಆ ಸಂದರ್ಭದ ಹಲವಾರು ಹಿರಿಯ- ಕಿರಿಯ ಕಲಾವಿದರು ಉತ್ಸಾಹದಿಂದ ಭಾಗವಹಿಸಿದ್ದ ಕಲಾ ಮೇಳದ ಸ್ಮರಣ ಸಂಚಿಕೆಯ ಸೆರಿಗ್ರಾಫ್ ಮುಖ ಪುಟ ವಿನ್ಯಾಸ ವಾಸುದೇವರಿಂದ ಮೂಡಿಬಂದಿತ್ತು. ಎಲ್ಲ ಕಲಾಮೇಳಗಳಲ್ಲೂ ವಾಸುದೇವ್‌ರವರದು ಮುಖ್ಯ ಭೂಮಿಕೆ.

12. ಈ ಶಿಬಿರದಲ್ಲಿ ಹೆಬ್ಬಾರರೊಂದಿಗೆ ಎನ್.ಎಸ್. ಬೇಂದ್ರೆ ಮತ್ತಿತರರು ಚಿತ್ರಿಸಿದರು.

ನಂತರದ ಹಲವು ವರ್ಷಗಳಲ್ಲಿ ಮಗ ಭರಣಿಯ ಶಾಲೆಗೆ ನೀಡುತ್ತಿದ್ದ ಹಲವು ಭೇಟಿಗಳಲ್ಲಿ ಪರಿಚಿತರಾದ ಅಮ್ಮುಜೋಸೆಫ್‌ರೊಂದಿಗೆ ಬೆಳೆದ ಪರಸ್ಪರ ಸಾನ್ನಿಧ್ಯ, ಸಾಮಾಜಿಕ, ಸಾಂಸ್ಕೃತಿಕ ರಂಗಗಳ ಸಹ ಸಂಬಂಧಗಳಂತೆ ಇಬ್ಬರೂ ಬಾಳಸಂಗಾತಿಗಳಾಗಲು ನಿರ್ಧರಿಸಿದರು. ಅಮ್ಮುಜೋಸೆಫ್‌ರವರ ಸಮಾಜ ಸೇವೆ, ಮಕ್ಕಳ ಮನಃಶಾಸ್ತ್ರದ ಅಧ್ಯಯನಗಳೇ ಅಲ್ಲದೆ ಸಾಂಸ್ಕೃತಿಕ ಅಧ್ಯಯನಗಳೂ, ವಾಸುದೇವ್‌ರ ಈ ಮುನ್ನಿನ ಚಿಂತನೆ - ಗ್ರಹಿಕೆಗಳನ್ನು ಸ್ವಲ್ಪ ಮಟ್ಟಿಗೆ ಪಲ್ಲಟಗೊಳಿಸಿದಂತೆ ಕಲಾಸೃಷ್ಟಿ ಮೂಡಿ ಬಂದಿತು ; ಕಲೆಯನ್ನು 'ಮಾಡುವುದು' ಬೇಡವೆನ್ನಿಸಿತು; ಅನುಭವಗಳನ್ನು ಅಭಿವ್ಯಕ್ತಿಸಬೇಕೆನ್ನಿಸಿತು.

ವಾಸುದೇವ್‌ರ ಅಪರಿಚಿತ ಮುಖಗಳಲ್ಲಿ ಅವರೊಳಗಿನ social activist ನ ಮುಖವೂ ಒಂದು. ನಮ್ಮ ದೇಶದಲ್ಲಿ ಮೊದಲ ಬಾರಿಗೆ ತುರ್ತುಪರಿಸ್ಥಿತಿಯನ್ನು ಘೋಷಿಸಿದ ಸಂದರ್ಭದಲ್ಲಿ ವಾಸುದೇವ್ ತಮ್ಮ ಮಿತ್ರರೊಂದಿಗೆ ತುರ್ತು ಪರಿಸ್ಥಿತಿಯ ಹೇರಿಕೆಯ ವಿರುದ್ಧ ಸಂವಿಧಾನದ ಮೂಲಭೂತ ಹಕ್ಕುಗಳ, ಹಾಗೂ ಧರ್ಮದ ವಿರುದ್ಧವಾಗಿ ಸಹಿಸಂಗ್ರಹಿಸುವ ಕಾರ್ಯದಲ್ಲಿ ಪಾಲ್ಗೊಂಡಿದ್ದವರು. ಅಯೋಧ್ಯೆಯ ಬಾಬ್ರಿಮಸೀದಿ ನೆಲಸಮಮಾಡಿದ ಮೂಲಭೂತವಾದೀ ಶಕ್ತಿಗಳ ವಿರುದ್ಧ ತಮ್ಮ ಧ್ವನಿಯನ್ನು ಕೇಳಿಸಲು ಅವರು, ಜಾತ್ಯಾತೀತ ದೃಷ್ಟಿಯನ್ನು, ಶಕ್ತಿಯನ್ನು ಬಲಪಡಿಸುವ ಉದ್ದೇಶದ coalition for secularism ಗುಂಪನ್ನು ಸೇರಿ ಪ್ರತಿವಾರ ಆ ಬಗ್ಗೆ ಚಿಂತನೆಯನ್ನೇ ಅಲ್ಲದೇ, ಆ ಬಗ್ಗೆ ಮಾಡಬೇಕಾದ ಕಾರ್ಯ ಸಾಧ್ಯತೆಗಳನ್ನೂ ಯೋಜಿಸುತ್ತಾರೆ. ಜನಸಾಮಾನ್ಯರನ್ನು ಎಚ್ಚರಿಸಲು ಹಾಗೂ ಮೂಲಭೂತವಾದಿಗಳ ಮತ್ತು ಬಿ.ಜೆ.ಪಿ.ಯಂಥ ಪಕ್ಷಗಳು ಹುಟ್ಟು ಹಾಕುವ ಕಥೆಗಳನ್ನು ಅಲ್ಲಗಳೆಯಲು ಭಿತ್ತಿ ಪತ್ರಗಳನ್ನೇ ಅಲ್ಲದೆ ಅಂಟು ಚೀಟಿಗಳನ್ನೂ (Stickers) ಮುದ್ರಿಸಿ ಬಿಡುಗಡೆಮಾಡಲಾಗಿದೆ. ಶಾಲೆಗಳಿಗೆ ಹೋಗಿ, ಮೂಲಭೂತವಾದಿ ಮನೋಧರ್ಮ ಬೆಳೆಯಲು ಬಿಟ್ಟರೆ ದೇಶ ಎದುರಿಸಬೇಕಾಗಿಬರುವ ಅಪಾಯಗಳನ್ನು ವಿದ್ಯಾರ್ಥಿಗಳಿಗೆ ಮನದಟ್ಟು ಮಾಡುವ ಪ್ರಯತ್ನಗಳನ್ನೂ ಮಾಡಲಾಗಿದೆ. ಈ ಸಂಸ್ಥೆಯ ಮೂಲಕ ಶಬಾನಾ ಅಝ್ಮಿ ಫಾರೂಖ್ ಶೇಖ್ ಮೊದಲಾದವರು ಬೆಂಗಳೂರಿನಲ್ಲಿ ಮೂಲಭೂತವಾದಿಗಳ ವಿರುದ್ಧದ ಸಾರ್ವಜನಿಕ ಸಭೆಗಳನ್ನು ಉದ್ದೇಶಿಸಿ ಮಾತನಾಡುವುದು ಸಾಧ್ಯವಾಯಿತು. ನವದೆಹಲಿಯ ಸಫ್ದರ್ ಹಷ್ಮಿ ಸ್ಮಾರಕ ಟ್ರಸ್ಟ್ ಸಹಕಾರದೊಂದಿಗೆ ಬೆಂಗಳೂರಿನಲ್ಲಿ Hum Sub Ayodhya ಪ್ರದರ್ಶನವೂ ನಡೆಯಿತು. ಆ ಸಂದರ್ಭದಲ್ಲಿ ರಾಜ್ಯ ನಾಟಕ ಅಕೆಡೆಮಿಯು ಮೂಲಭೂತ ವಾದದ ವಿರುದ್ಧ ಕಲಾವಿದರ ಕಾರ್ಯಾಗಾರವೊಂದನ್ನೂ ವ್ಯವಸ್ಥೆಮಾಡಿತು. ವಾಸುದೇವ್‌ರೊಂದಿಗೆ ಕರ್ನಾಟಕದ ೧೫ ಕಲಾವಿದರು ಭಾಗವಹಿಸಿ ಕಲಾಸೃಷ್ಟಿಯಲ್ಲಿ ತೊಡಗಿದರು. ೧೯೯೩ರ ಆಗಸ್ಟ್ ೧೫ ರಂದು ಅಯೋಧ್ಯೆಗೆ, ಬೆಂಗಳೂರಿನ coalition for secularism ಪರವಾಗಿ ಸಹಮತ್‌ನ ಮುಕ್ತನಾದ್ ಸಾಂಸ್ಕೃತಿಕ ಪ್ರದರ್ಶನದಲ್ಲಿ ಪಾಲ್ಗೊಳ್ಳಲು ಹೋಗಿದ್ದ ೧೧೦ ಜನದಲ್ಲಿ ವಾಸುದೇವರೊಬ್ಬರು.[13]

ಸುಮಾರು ೧೯೩೦ರಿಂದ ನಮ್ಮಲ್ಲಿ ಕಾಣಿಸಿಕೊಂಡಿರುವ ಈ ಮೂಲಭೂತವಾದಿ ಚಳುವಳಿಯನ್ನು ಹಿಟ್ಲರನ ಜರ್ಮನಿಯಲ್ಲಿ ನಾಝಿಗಳು ಜ್ಯೂಗಳನ್ನು ಶೋಷಿಸಿದ ಬೆಳವಣಿಗೆಗೆ ಹೋಲಿಸುವ ವಾಸುದೇವ್ ಇಂಥ ಬೆಳವಣಿಗೆಗಳಿಂದ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆಯಾಗುತ್ತದೆ ಎನ್ನುತ್ತಾರೆ. ಈ ಮಾತುಗಳಿಗೆ ಪೂರಕವಾಗಿ ಹುಸೇನರ ಕಲಾಕೃತಿಗಳನ್ನು ನಾಶಮಾಡಿದ ಘಟನೆ ಹಾಗೂ 'fire' ಚಲನ ಚಿತ್ರದ ಪ್ರದರ್ಶನವನ್ನು ಬೆದರಿಕೆಯೊಡ್ಡಿ ಮುಂಬಯಿಯಲ್ಲಿ ನಿಲ್ಲಿಸಿದ ಘಟನೆಗಳೂ

---

13. Artist and Activist : Interview withVasudev : By Chetan Krishna Swamy, Frontline, May 6, 1994, p ; 81

೧೯೯೮ರಲ್ಲಿ ನಡೆದವು. 1999ರಲ್ಲಿ 'water' ಚಲನ ಚಿತ್ರದ ಚಿತ್ರೀಕರಣಕ್ಕೆ [illegible] ಮತಾಂಧರ ಜಿದರಿಕೆಯಿಂದ ಆ ಚಿತ್ರದ ನಿರ್ಮಾಣವೇ ನಿಂತುಹೋಯಿತು! [illegible] ಸಾಮಾಜಿಕ ಆಶಯಗಳು ವಾಸುದೇವ್‌ರ ಕಲಾಕೃತಿಗಳಲ್ಲಿ ತೀವ್ರತೆಯಿಂದ [illegible] ಆದರೂ, ಹಲವು ಭಿತ್ತಿ ಪತ್ರಗಳಲ್ಲಿ, ಹಾಗೂ ಕಲ್ಕತ್ತೆಯ ಸೀಮಾ ಆರ್ಟ್ ಗ್ಯಾ[illegible] 'Wounds' ಕಲಾ ಪ್ರದರ್ಶನಕ್ಕೆ ಕಳುಹಿಸಿಕೊಟ್ಟ ಕಲಾಕೃತಿಯೊಂದರಲ್ಲೂ ಒಳಗಿನ ಒತ್ತಡದ [illegible] 'The agony of man' ಕಾಣಿಸಿಕೊಂಡಿತ್ತು.

ವಾಸುದೇವ್‌ರ ಕಲಾಸೃಷ್ಟಿ : ೧೯೬೦-೭೦

ವಾಸುದೇವ್‌ರ ಕಲೆಯ ಮೂಲ ಶಕ್ತಿ, ಸ್ಫೂರ್ತಿ ಕನ್ನಡದ ಜಾನ[illegible] ಕನ್ನಡ ಸಾಹಿತ್ಯವೇ ಆದರೂ ಪ್ರಾರಂಭದ ಸಂದರ್ಭದಲ್ಲಿ ಅವರೇ ಹೇಳುವಂತೆ [illegible] "... is based on myths drawn from various sources folklore, legend, and Indian mythology. Foir years I have dwelt on the theme of Maithuna - the act of love, not mearly between man and woman, but also between the sun and the moon, the earth and the sky, the stars and the clouds, My world is animistic, in it bird and reptile, fish and fowl, seed and fruit, man and woman, live together in undulating hills and peaks seething with life. A tree which appreared in[illegible] works grew into a tree of life, which I called vriksha. This kalpavrksha [illegible] centre stage, uniting all else in my work later faced with a situat[illegible] pain, its branches agrew into the tree of life and death space brou[illegible] memo-ries / a strength. and this strength triggered the tree. [14]

ಪ್ರಾರಂಭದಲ್ಲಿ ಅಂದರೆ ಬಾಲ್ಯದಲ್ಲಿ ವಾಸುದೇವ್ ಮನಸ್ಸಿನ ಮೇಲೆ ಪರಿ[illegible] ಸುತ್ತಲಿನ ಕಲೆ – ಕರಕುಶಲ ಕಲೆಗಳ ಮಾದರಿಗಳು, ತಾಯಿಯ ಕಲಾಕೃತಿಗ[illegible] ಪ್ರತಿನಿತ್ಯ ಕಣ್ಣಿಗೆ ಬೀಳುತ್ತಿದ್ದ ರವಿವರ್ಮನ ಓಲಿಯೋಗ್ರಾಫ್ ಪ್ರಿಂಟ್‌ಗಳ ಜ[illegible] ಕಣ್ಣಿನ ನೋಟವನ್ನು ಆಕರ್ಷಿಸುತ್ತಿದ್ದ ದೃಶ್ಯಗಳು, ಪ್ರಕೃತಿ ಅದರ ಬಣ್ಣಗಳು, [illegible] ಉಡುಪು, ಆಚಾರ – ವಿಚಾರ ಇತ್ಯಾದಿಗಳು ಇಂದಿಗೂ ಅವರಮನದಾಳದಲ್ಲಿ [illegible] ಅನಿವಾರ್ಯ ಸಂದರ್ಭಗಳಲ್ಲಿ ಅಗತ್ಯ ರೂಪಾಂತರಗೊಳ್ಳೊಂದಿಗೆ ಕಾಣಿಸಿಕೊಂಡು ಹೊ[illegible] ಮನಃ ಶಾಸ್ತ್ರೀಯವಾಗಿ ಸಹಜವೇ ಆಗಿದೆ. ಆದರೆ ಈ ರೂಪಗಳನ್ನು ಅವರ [illegible] ಕಾಲಾಂತರದ ರೀತಿಯಲ್ಲಿನ ವೈವಿಧ್ಯದಿಂದಾಗಿ, ಆರೂಪಗಳು ಪಲ್ಲಟಗೊಂಡು ಹೊ[illegible] ನೀಡುವ ರೀತಿಯನ್ನು ವಾಸುದೇವ್‌ರ ಇಡೀ ಅಭಿವ್ಯಕ್ತಿಯಲ್ಲಿ ಗಮನಿಸಬಹುದು; [illegible] ಭಾವಗಳನ್ನು ಅನುಭವಿಸಬಹುದು.

೧೯೬೦ರ ದಶಕದಲ್ಲಿ ಯೌವನದ ಆಶಯಗಳಿಗೆ ಸೂಕ್ತವಾದ, ಸ್ವಚ್ಛ[illegible] ಪೂರಕವಾದ Fantasy ಮಾಲೆಯ ಕೃತಿಗಳಲ್ಲಿ ಮಾನವೀಯ ಭಾವಗಳು ಜನಪ[illegible] ಮೂಲದಿಂದ ಮೂಡಿಬಂದಿವೆ. ಈ ಕೃತಿಗಳಲ್ಲಿ ಅಕೆಡೆಮಿಕ್ ಆಗಿ [illegible]ಯಲ್ಲಿ ಕಲಿಯಬೇಕಾಗಿದ್ದ ಅಥವಾ ಕಲಿತಿದ್ದ ಘೂದೃಶ್ಯಚಿತ್ರಣ, ಸಂಯೋಜನೆ, ಮಾನವ ರೂಪಗಳ

14. ಕ್ರಿಮ್‌ಸನ್ ಗ್ಯಾಲರಿ ಕಲಾ ಪ್ರದರ್ಶನದ ಕೆಟಲಾಗ್‌ನಲ್ಲಿ Togetherness ಶೀರ್ಷಿಕೆಯಡಿಯ ವಾಸುದೇವ್ ಹೇಳಿಕೆ ೧೯೯೭. INSCAPE - paintings by Vasudev ಸಾಕ್ಷಿಗ್ಯಾಲರಿ ಕೆಟಲಾಗ್‌ನಲ್ಲಿ ಎಸ್. ಕೃಷ್ಣನ್ ಉದ್ಧರಿಸಿರುವಂತೆ : ೧೯೯೩

ಸಾಂಕೇತಿಕ ಸಮ್ಮಿಲನದಂಥ ಸ್ವಚ್ಛಂದತೆ ಅನುಭವವಾಗುತ್ತದೆ. ಅದರ ಜತೆಗೇ ೧೯೬೨-೬೩ರಲ್ಲಿ ಆಸಂದರ್ಭದ ಖ್ಯಾತ ಕಲಾವಿದರಲ್ಲೊಬ್ಬರಾಗಿ, ಲಂಡನ್ನಿನಲ್ಲಿ ವಾಸವಾಗಿದ್ದ ಫ್ರಾನ್ಸಿಸ್ ನ್ಯೂಟನ್ ಸೌಝಾ ರವರ ಕಲಾಕೃತಿಗಳನ್ನು ನೋಡಿ, ಅಧ್ಯಯನ ಮಾಡಿ, ಪ್ರಭಾವಿತರಾಗಿದ್ದ ವಾಸುದೇವ್ 'ಸಿಟಿ' ಶೀರ್ಷಿಕೆಯ ಕಲಾಕೃತಿಗಳ ಸರಣಿಯನ್ನು ಮಾಡಿದ್ದು ಗಮನಾರ್ಹ. ಅದೇ ಹಾದಿಯಲ್ಲಿ ಚಿತ್ರಿಸುತ್ತ ನಡೆದಂತೆ, ತಮ್ಮದೇ ಹಾದಿಯನ್ನು ಅವರು ಅನ್ವೇಷಿಸಿ ಕೊಳ್ಳುವಂತೆ ಕಂಡರು 'Procession' ನಂಥ ಕೃತಿಗಳು ಆದ್ಯಷ್ಟಿಯವು.

ಈ ಮಧ್ಯೆ ಪಣಿಕ್ಕರ್‌ರವರು 'words and symbols' ಎಂಬ ಸರಣಿಯನ್ನು ಚಿತ್ರಿಸಲಾರಂಭಿಸಿದಾಗ, ಆ ಕೃತಿಗಳು ಚಿತ್ರಿಸಲ್ಪಟ್ಟ ಪ್ರಕ್ರಿಯೆಯ ರೀತಿಗೆ ಕುತೂಹಲಗೊಂಡ ವಾಸುದೇವ್-

"ಕ್ಯಾನ್‌ವಾಸ್ ಅವಕಾಶದಲ್ಲಿ ಬಣ್ಣಗಳನ್ನು ತುಂಬುವುದು ಸಹಜ; ಸೃಜನಾತ್ಮಕವಾಗಿ ಅವನ್ನು ಹೊರತೆಗೆಯುವುದು ಕಷ್ಟಸಾಧ್ಯ" ಎಂದು ವಿವರಿಸಿದ ಪಣಿಕ್ಕರವರ ಮಾತುಗಳಿಂದ ಆಕರ್ಷಿತರಾಗಿ ಕೇವಲ ಎರಡೇ ಬಣ್ಣಗಳಿಂದ ಕಲಾಕೃತಿಗಳನ್ನುಸೃಷ್ಟಿಸಿದರು. ಕಲಾಕೃತಿಯೊಂದಕ್ಕೆ ಬಣ್ಣಗಳು ನೀಡುವ ಶಕ್ತಿ ಮತ್ತು ಅರ್ಥಗಳನ್ನು ಕಂಡುಕೊಳ್ಳಲು ಈ ಸಂದರ್ಭ ಅವರಿಗೆ ನೆರವಾಯಿತು. ೧೯೭೦ರ ಸಂದರ್ಭದಲ್ಲಿ ದಕ್ಷಿಣ ಭಾರತದ ದೇವಾಲಯ - ಪುರಾಣಗಳು, ವಾಸ್ತು ಶಿಲ್ಪ ಉಬ್ಬುಶಿಲ್ಪ ಭಿತ್ತಿಚಿತ್ರ ಇತ್ಯಾದಿಗಳ ಪ್ರಭಾವ ಸಮಕಾಲೀನವಾಗಿ ವಾಸುದೇವ್‌ರಲ್ಲಿ ಕಾಣಸಿಕೊಂಡಿದೆ. ಕ್ಯಾನ್‌ವಾಸಿನ ಅವಕಾಶದಲ್ಲಿ (space) ಬಣ್ಣಗಳನ್ನು ಲೇಪಿಸಿ, ಕೆಲವೊಮ್ಮೆ ಹಲವು ಬಣ್ಣಗಳನ್ನು ಲೇಪಿಸಿ ತಮ್ಮ ಆಶಯಕ್ಕೆ ಪೂರಕವಾಗಿ ಕಾಣಿಸಿಕೊಂಡ ರೂಪಗಳನ್ನು ಶಾಶ್ವತಗೊಳಿಸಿಕೊಳ್ಳಲು ಬಣ್ಣಗಳನ್ನು ಒರೆಸಿ, ಉಜ್ಜಿ, ತೀಡಿ ಪಣಿಕ್ಕರ್ ಸ್ಫೂರ್ತಿ ನೀಡಿದಂತೆ ಬಣ್ಣಗಳನ್ನು ಹೊರತೆಗೆದು ಕ್ಯಾನ್‌ವಾಸಿನ ಅವಕಾಶದಲ್ಲಿ ಉಳಿಸಿಕೊಂಡಿದ್ದ ಬಣ್ಣಗಳ ಸಂಯೋಜನೆಯ, ವಿಶಿಷ್ಟ ಕಲ್ಪನೆಯ ರೂಪಗಳ ಮೇಲೆ ಚೂಪು ಮೊನೆಯಿಂದ (ಕುಂಚದ ಹಿಮ್ಮೊನೆಯಿಂದ!) ರೇಖಿಸಿ, ಬಣ್ಣ ತೆಗೆದು ರೇಖೆಗಳನ್ನು ಪಡೆದು ಬ್ರಹ್ಮ - ಹಂಸ, ಶಿವ-ನಂದಿ, ವಿಷ್ಣು-ಗರುಡ, ಷಣ್ಮುಖ-ನವಿಲು, ಹೀಗೆ ಕಲಾಕೃತಿಗಳ ಸರಣಿಯೊಂದನ್ನು ಮೂಡಿಸಿದರು. ಈ ತಂತ್ರ ೧೯೯೯ ರಲ್ಲೂ ಮುಂದುವರೆದಿತ್ತು.

ಪಣಿಕ್ಕರ್ ಮೂಲದ ಕ್ಯಾಲಿಗ್ರಾಫಿಯೂ (ಅದು ಕನ್ನಡ ವರ್ಣಮಾಲೆಯ ಅ ಆ ಇ ಈ ಗಳೂ ಆಗಿರಬಹುದು) ರೂಪಸಂಯೋಜನೆಗೆ ಪೂರಕವಾಗಿ ದುಡಿಸಿಕೊಳ್ಳಲ್ಪಟ್ಟಿದೆ. ಬಣ್ಣಗಳ ಬಿಂದುಗಳನ್ನು, ತೇಪೆಗಳನ್ನು ಅಗತ್ಯಕಂಡಲ್ಲಿ ತಂದುಕೊಳ್ಳುತ್ತಾರೆ. ಈ ಸಂಯೋಜನೆಯ ಅಪೂರ್ಣ ಆಟದಲ್ಲಿ ರೂಪಗಳು ಕ್ಯಾನ್‌ವಾಸ್‌ನ ಹೊರಕ್ಕೂ, ಅಂದರೆ ಮತ್ತೊಂದು ಕ್ಯಾನ್‌ವಾಸ್‌ಗೂ ಮುಂದುವರೆಯುವಂತೆ ವಾಸುದೇವ್‌ರ 'The act of painting' ಮುಂದುವರೆಯುತ್ತದೆ.

'ಮೈಥುನ' ಶೀರ್ಷಿಕೆಯ ಕೃತಿ ಮಾಲೆಯೂ ಇದೇ ತಂತ್ರ - ಮಾಧ್ಯಮಗಳಲ್ಲಿ ಸ್ವಲ್ಪ ಕಾಲ ಮೂಡಿಬಂದಿತು. ಈ 'ಮೈಥುನ' ಮಾನವ ಪ್ರೇಮದ ವೈಭವೀಕರಣದ ಪರಾಕಾಷ್ಠೆ. ಇದು ಕೇವಲ ಗಂಡು ಹೆಣ್ಣಿನ ನಡುವೆಯ ಲೌಕಿಕ ಆಟವಲ್ಲ; ಸೂರ್ಯಚಂದ್ರ, ಭೂಮಿ ಮತ್ತು ಆಕಾಶ, ಮುಗಿಲು ಮತ್ತು ನಕ್ಷತ್ರ ಹೀಗೆ ಅಲೌಕಿಕ ಅನುಭವದ 'ಮೈಥುನ'. ೧೯೭೪-೭೫ರಲ್ಲಿ ಚೋಳ ಮಂಡಳದಲ್ಲಿ ಕುಪ್ಪುಸ್ವಾಮಿಯಿಂದ ಲೋಹಮಾಧ್ಯಮದ ಚಪ್ಪಟೆ ಅವಕಾಶದಲ್ಲಿ (space) ಉಬ್ಬು ತಗ್ಗುಗಳಿಂದ ರೂಪಗಳನ್ನು ಸೃಷ್ಟಿಸುವ ತಂತ್ರವನ್ನು ಕಲಿತ ವಾಸುದೇವ್ ಹಿತ್ತಾಳೆ, ತಾಮ್ರ ಮುಂತಾದ ಲೋಹಗಳ ಚಪ್ಪಟೆ ಹಾಳೆಗಳ ಅವಕಾಶಗಳಲ್ಲಿ, ಹಲವು ಹಂತ-ತಂತ್ರಗಳಲ್ಲಿ, ಮೈವಳಿಕೆಗಳ (texture) ನೆರವಿನಿಂದ ಅವರ ಅತಿ ಪ್ರಿಯವಾದ ರೇಖಾರೂಪಗಳನ್ನು ರಚಿಸಿ ಯಶಸ್ವಿಯಾದರು.

ಈ ಲೋಹದ ಉಬ್ಬು ರೂಪಗಳು ಅವರಿಗೆ ಸಾಕಷ್ಟು ಹೆಸರನ್ನು ಗಳಿಸಿಕೊಟ್ಟದುಂಟು. ಈತಂತ್ರ ಮೂಲತಃ ದಕ್ಷಿಣ ಭಾರತದ ದೇವಾಲಯಗಳ ಕಲೆಯ ಮೂಲದ್ದಾಗಿದ್ದು ಅದಕ್ಕೆ ಸಮಕಾಲೀನತೆಯನ್ನು ಲೇಪಿಸುವಲ್ಲಿ ವಾಸುದೇವ್ ಮತ್ತಿತರದು ಗಣನೀಯ ಪಾತ್ರ.[15] ಈ ಮಾಧ್ಯಮ ಮತ್ತು ತಂತ್ರದಲ್ಲಿ ಹಾಗೂ ಉಕ್ಕಿನ ಹಾಳೆಯ ಅವಕಾಶದಲ್ಲಿ ಎನಾಮಲ್ ಮಾಡಿ, ಮದರಾಸು, ಬೆಂಗಳೂರು ಹಾಗೂ ನ್ಯೂಯಾರ್ಕ್‌ಗಳಲ್ಲಿ ಮ್ಯೂರಲ್‌ಗಳನ್ನು ವಾಸುದೇವ್ ಮಾಡಿದರು.[16] ಇವನ್ನು ಬಣ್ಣಗಳಿಂದ ಚಪ್ಪಟೆ ಅವಕಾಶದಲ್ಲಿ ಸೃಷ್ಟಿಸಿದಾಗ ಭಿತ್ತಿಚಿತ್ರವೆಂದೂ, ಭಿತ್ತಿಯ ಅವಕಾಶದಲ್ಲಿ ಉಬ್ಬು ಮಾಧ್ಯಮಗಳಿಂದ ಸೃಷ್ಟಿಸಿದಾಗ ಭಿತ್ತಿಶಿಲ್ಪ ಅಥವಾ ಉಬ್ಬು ಶಿಲ್ಪವೆಂದೂ ಕರೆಯಬಹುದಾಗಿದೆ.

೧೯೬೦ರ ಗಿರೀಶ್ ಕಾರ್ನಾಡ್‌ರೊಂದಿಗಿನ ಧಾರವಾಡದ ಭೇಟಿಯ ಸಂದರ್ಭ ಈ ಮೊದಲೇ ದಾಖಲಿಸಿರುವಂತೆ ಬೇಂದ್ರೆಯವರೊಂದಿಗಿನ ಚರ್ಚೆಗಳ ಪ್ರಭಾವದಿಂದ ಅವರ ಕಾವ್ಯದ ಒಳನೋಟಗಳನ್ನು ಕುರ್ತುಕೋಟಿಯವರಿಂದ ಅರಿತ ವಾಸುದೇವ್ ನಂತರ ಬೇಂದ್ರೆಯವರ ಕಾವ್ಯದ ತೀವ್ರ ಅಧ್ಯಯನದಲ್ಲಿ ತೊಡಗಿದರು. ಬೇಂದ್ರೆಯವರ 'ಕಲ್ಪವೃಕ್ಷ ವೃಂದಾವನಂಗಳಲ್ಲಿ' ಕವನವನ್ನು ವಸ್ತುವಾಗಿಸಿಕೊಂಡು ಹಲವಾರು ಕೃತಿಸರಣಿಗಳನ್ನು ಅವರು ಸೃಷ್ಟಿಸಿದರು. ಅವರನ್ನು ಸಾಕಷ್ಟು ಜನಪ್ರಿಯರನ್ನಾಗಿಸಿದ ಸಮಕಾಲೀನ ಭಾರತೀಯ ಕಲಾರಂಗಕ್ಕೆ ಅನನ್ಯರೂಪ ಕಲ್ಪನೆಯನ್ನುಕೊಡುಗೆಯಾಗಿತ್ತ ಕಲಾಕೃತಿಗಳಲ್ಲಿ 'ವೃಕ್ಷ' ಕೃತಿ ಸರಣಿ ಬಹುಮುಖ್ಯವಾದದ್ದು.

'ವೃಕ್ಷ' ದ ವೈವಿಧ್ಯಮಯ, ವಿಶಿಷ್ಟರೂಪ ಕಲ್ಪನಾ ವಿಲಾಸದಲ್ಲಿ ವಾಸುದೇವ್ ವಿಹರಿಸಿದ ರೀತಿ ಅನನ್ಯ.[17] ಅಪೂರ್ವ ಜೀವಧ್ವನಿಯ ವಕ್ತಾರರಂತೆ ಅವರು ಪ್ರಾಣಿ-ಪಕ್ಷಿ, ಸರೀಸೃಪ, ಮೀನು-ಆಮೆ, ಬೀಜ ಮತ್ತು ಫಲ, ಗಂಡು, ಹೆಣ್ಣು ಕಾವ್ಯಮಯ ಪರಿಳಿತಗಳುಳ್ಳ ಶಿಖರ-

---

15. (ಅ) ಮುಂದೆ ೧೯೮೦ ರ ದಶಕದಲ್ಲಿ ತಂಜಾವೂರು ಗಾಜು ಚಿತ್ರ ಶೈಲಿಗೆ (ಈ ಚಿತ್ರ ಶೈಲಿಯನ್ನು ವಿಶಿಷ್ಟವಾಗಿ ದುಡಿಸಿಕೊಂಡರಾಜಾ ರವಿವರ್ಮ ಇಲ್ಲಿ ಅಪ್ರಸ್ತುತ) ಕೆ.ಜಿ. ಸುಬ್ರಮಣಿಯನ್, ೧೯೯೦ ರ ದಶಕದಲ್ಲಿ ದೇವಾಲಯ ಉತ್ಸವ ಶಿಲ್ಪಗಳಿಗೆ ವಿಶಾಖಪಟ್ಟಣದ ರವೀಂದ್ರ ರೆಡ್ಡಿಯವರು ತಂದಿತ್ತ ಸಮಕಾಲೀನತೆ ಇಲ್ಲಿ ನೆನಪಾಗುತ್ತದೆ.

ಇವರೆಲ್ಲ ದಕ್ಷಿಣದವರು ಎಂಬುದೂ ಗಮನಿಸಬಹುದಾದ ಅಂಶವಾಗಿದೆ.

(ಬ) 'ನಮ್ಮ ಪಾರಂಪರಿಕ ಶಿಲ್ಪ ಮತ್ತು ಚಿತ್ರಕಲೆಗಳ ಚೌಕಟ್ಟಿನಲ್ಲಿ ನೂತನ ಆವಿಷ್ಕಾರಗಳಿಗೆ ಸಾಕಷ್ಟು ಅವಕಾಶವಿರುವುದು ನಿಜ. ಇಂದಿನಕಲೆಯ ಸೃಷ್ಟಿಗೆ ಪಾರಂಪರಿಕ ತಂತ್ರಗಳನ್ನೇ ಉಪಯೋಗಿಸಬಹುದು' - ಎಸ್.ಜಿ. ವಾಸುದೇವ್, "ಕರ್ನಾಟಕದಲ್ಲಿ ಕಲೆ ೨೫ ವರ್ಷ" ಲೇಖಕರು ಎಸ್.ದಿವಾಕರ್ ಸುಧಾ, ಸಂಚಿಕೆ ೪೧, ಸಂಪುಟ ೧೭, ಅಕ್ಟೋಬರ್ ೧೧, ೧೯೮೧

16. Mural ಎಂಬ ಚಿತ್ರಣ ವಿಧಾನ Fressco ಗಿಂತಲೂ ವಿಭಿನ್ನ ರೀತಿಯದು. Fressco ಕಲ್ಲಿನ ಭಿತ್ತಿಯಲ್ಲಿ ಹಸಿಯಾದ ಮಣ್ಣು, ಸಗಣಿ, ಹುಲ್ಲು ಇತ್ಯಾದಿಗಳಿಂದ ಚಪ್ಪಟೆಪದರ ನಿರ್ಮಿಸಿ ಅದುಹಸಿಯಾಗಿರುವಾಗಲೇ ರೇಖಿಸಿ, ಬಣ್ಣಗಳನ್ನು ತುಂಬಿ ಚಿತ್ರಿಸುವ ವಿಧಾನ ಅಜಂತಾ, ಎಲ್ಲೋರಾ, ಬಾದಾಮಿ, ಸಿತ್ತನ್ ವಾಸಲ್‌ಗಳಲ್ಲಿ ಇಂದಿಗೂ ನಾವು ಕಾಣಬಹುದು. ನುಣುಪಾಗಿರುವ ಗಾರೆಯ ಗೋಡೆಯ ಒಣಗಿದ ಅವಕಾಶದಲ್ಲಿ ರೇಖಿಸಿ ಬಣ್ಣಗಳಿಂದಚಿತ್ರಿಸಿರುವ ವಿಧಾನ Mural ವಿಧಾನ, ಹಂಪೆ, ಲೇಪಾಕ್ಷಿ, ಶ್ರೀರಂಗಂ, ಚಿದಂಬರಂ, ತಿರುವಾರೂರು ಇತ್ಯಾದಿ ಸ್ಥಳಗಳಲ್ಲಿ ನೋಡಬಹುದಾಗಿದೆ. ಆದರೆ ೨೦ನೆಯ ಶತಮಾನದ ಅಂತ್ಯದಲ್ಲಿ ಯಾವುದೇ ಕಟ್ಟಡದ ಒಳ ಅಥವಾ ಹೊರ ಗೋಡೆಗಳ ಮೇಲ್ಮೈ ಅವಕಾಶ (Space) ದಲ್ಲಿ ಕಲಾವಿದರು ಅಭಿವ್ಯಕ್ತಿಸುವ ಯಾವುದೇ ರೀತಿಯ ಅಭಿವ್ಯಕ್ತಿಗೂ Mural ಎಂದು ಕರೆಯುವ ವಾಡಿಕೆಯಿದೆ. ಪ್ರತಿಷ್ಠಾಪನಾ ಕಲೆಯ(Installation art) ಅಭಿವ್ಯಕ್ತಿ ಭಿತ್ತಿಗಳಲ್ಲಿಯೂ ಮೂಡಿ ಬರಬಹುದಾಗಿದೆ.

17. The tree has been portrayed in Indian painting, as such,it is not a new thought, but the visual genesis of the Vriksha has been uniquely treated with a stress on design and pattern - **J. Sultan Ali** on **S.G. Vasudev,** Indian Painting through the ages : Published by Vivekananda Kendra Prakashan, Madras 1982.

ಕಲಾಕೃತಿಗಳಲ್ಲಿ ಜೀವನೋತ್ಸಾಹದಿಂದ ಬದುಕುತ್ತಿರುವ ಅನುಭವವನ್ನು ತಂದುಕೊಡುತ್ತಾರೆ. ಈ ವೃಕ್ಷ, ಪ್ರಾಣಿಗಳ **ಕಲ್ಪವೃಕ್ಷವೂ** ಆಗಿ ಕಾಣಿಸಿ ಕೊಂಡಿತು ! ಬದುಕಿನ ವೃಕ್ಷ ಎಂಬ ರಂಗಭೂಮಿಯಲ್ಲಿ ಕಲಾವಿದನ ಎಲ್ಲ ಚಿಂತನೆಗಳೂ ವೈವಿಧ್ಯ ವೈರುಧ್ಯಗಳಿಂದ ಕಾಣಿಸಿಕೊಂಡಿವೆ. ಬದುಕಿನ ಜೀವಂತಿಕೆಯನ್ನು ಚಿತ್ರಿಸಿಕೊಂಡ 'ವೃಕ್ಷ' ಕೃತಿ ಸರಣಿ ಲೋಹದ ಉಬ್ಬು ಶಿಲ್ಪಗಳಲ್ಲೂ, ಅಪರೂಪಕ್ಕೆ ಪೂರ್ಣ ಶಿಲ್ಪವೊಂದರಲ್ಲೂ ಯಶಸ್ವಿಯಾಗಿ ಮುಂದುವರೆಯಿತು.[18]

ಮುಂಬಯಿಯ ಸಿಟಿ ಬ್ಯಾಂಕಿಗಾಗಿ ಸೃಷ್ಟಿಸಿದ ನಾಲ್ಕೂ ನಿಟ್ಟಿನತ್ತ ಮುನ್ನುಗ್ಗಿ ಧಾವಿಸುತ್ತಿರುವ, ಸೃಷ್ಟಿಯ ಬೆಳವಣಿಗೆಯ ವೃಕ್ಷದಂತೆ ಕಾಣುವ ಶಿಲ್ಪ, ತನ್ನ ಬೊಡ್ಡೆಯ ಮೇಲ್ಮೈನಲ್ಲಿ ಸೂರ್ಯ, ಹರಿವ ನದಿ, ಮೀನು ಇತ್ಯಾದಿಗಳನ್ನು ಕಾವ್ಯಮಯ ಲಯದ ರೂಪಗಳಲ್ಲಿ ಹೊಂದಿಸಿಕೊಂಡಿದೆ ರೂಪದ ಸಂಯೋಜನೆಯ ಹೊಂದಾಣಿಕೆಗೆ ಅಲ್ಲಲ್ಲಿ ಮೊಳೆಯಾಕಾರದ ಲೋಹದ ತುಣುಕುಗಳನ್ನು ಬೆಸುಗೆ ಹಾಕಲಾಗಿದೆ. ಜೋಳಮಂಡಲದ ಛಾಪು ಕಾಣುವ ಈ ಶಿಲ್ಪವನ್ನು ಬ್ಯಾಂಕೊಂದರ ನಿರಂತರ ಬೆಳವಣಿಗೆಯ ಆಶಯದ ಸಂಕೇತದಂತೆ ರೂಪಿಸಲಾಗಿರುವುದು ಅನುಭವಕ್ಕೆ ಬರುತ್ತದೆ.[19]

ಹೀಗೆ ಮುಂದುವರೆದ 'ವೃಕ್ಷದ ವೈವಿಧ್ಯತೆ ಕಲ್ಪವೃಕ್ಷದ ಅಲೌಕಿಕ ಅನುಭವ ರೂಪಕ್ಕೆ ನೀಡಿದ ಸಮಕಾಲೀನ ಲೌಕಿಕತೆಗಳು ಅವರ ವೈಯಕ್ತಿಕ ಬದುಕಿನ ಮುಖಗಳನ್ನು, ಆಳದ ನೋವುಗಳನ್ನೂ ಒಳಗೊಂಡಿತ್ತು. ಅರ್ನಾವಾಝ್‌ರ ಸಾವು (೨೪.೨.೧೯೮೮) ಅವರ ಕಲೆಯಲ್ಲಿ Intellect ಮತ್ತು Instinct ಗಳನ್ನು ಅಪೂರ್ವವಾಗಿ ಬೆಸೆದು, ಈ ಹಿಂದಿನ ಅವರ ಎಲ್ಲ ಕೃತಿ ಸರಣಿಗಳಿಂದ ವಿಭಿನ್ನ ದೃಶ್ಯ ಭಾಷೆಯನ್ನು ದುಡಿಸಿಕೊಳ್ಳುವ ಪ್ರಯತ್ನ ಮಾಡಲುಕಾರಣವಾಯಿತು.[20] ಪೆನ್ ಮತ್ತು ಇಂಕ್‌ಗಳಲ್ಲಿನ ಈ ಪ್ರಯತ್ನಗಳಲ್ಲಿ ವಾಸುದೇವ್‌ರ ಸ್ವಭಾವ ಚಿತ್ರಾತ್ಮಕ ರೇಖಾಚಿತ್ರಗಳು ಈ ಹಿಂದೆ ಗೀತಾ ಡಾಕ್ಟರ್‌ಗೆ ಅರ್ನಾವಾಝ್ ತಮ್ಮ ಕಲಾಕೃತಿಗಳ ಬಗ್ಗೆ ಹೇಳಿದ್ದಂತೆ ವಾಸುದೇವ್‌ರ ಈ ಕೃತಿಗಳಲ್ಲಿ "... Drawing is the key", 'the line' ಶೀರ್ಷಿಕೆಯಡಿ ಈ ದೃಷ್ಟಿಯ ಕೃತಿಗಳು ಮೂಡಿಬಂದಿದ್ದವು. ಅರ್ನಾವಾಝ್ ರ ನೆನಪು ಕಾಡಿದಂಥ ಭಾವ ಉತ್ಕರ್ಷ ಒತ್ತಡಗಳಲ್ಲಿ **'Tree of life and death'** ಮೂಡಿಬಂದಿರುವ ಮೊದಲಿನ 'Tree of life' ನಿಂದ ಬೀಜಾಂಕುರಗೊಂಡದ್ದೇ ಆಗಿದೆ. ಬದುಕು ಸಾವುಗಳ ನಿಗೂಢತೆಯನ್ನು ಕುತೂಹಲದಿಂದ, ಮಗುವಿನ ಮುಗ್ಧತೆಯಿಂದ ಕಂಡಿರುವ ಹಲವು ಕೃತಿಗಳಿದ್ದವು. ಆದರೆ ಈ ಮುಗ್ಧತೆಯ ಹೊರಮುಸುಕಿನ ಹಿಂದಿನ **ಬಿಗಿಯನ್ನು** ಹೋಗಲಾಡಿಸುವಂತೆ ಬದುಕನ್ನು ಪುನಃ ಜೀವಂತ

---

18. ೧೯೮೨ ರಲ್ಲಿ ಬೆಂಗಳೂರಿನ ವಿಶ್ವೇಶ್ವರಯ್ಯ ಕೈಗಾರಿಕೆ ಮತ್ತು ತಾಂತ್ರಿಕ ವಸ್ತು ಸಂಗ್ರಹಾಲಯದ ಆಶ್ರಯದಲ್ಲಿ ನಡೆದ ಭಾರತದ ಮೊದಲ **Techno Art Camp** ೧೯೮೨, ತನ್ನ ವಿಶಿಷ್ಟ ಉದ್ದೇಶ ಸಾಧಿಸಿದ ಮಹತ್ವದಿಂದ ಐತಿಹಾಸಿಕ. ಆ ಸಂದರ್ಭದಲ್ಲಿ ಭಾರತದ ಖ್ಯಾತ ಶಿಲ್ಪಿಗಳಾಗಿದ್ದ ಪಿ.ಸಿಂಗ್, ಅಜಿತ್ ಚಕ್ರವರ್ತಿ, ರಾಘವ್ ಕನೇರಿಯಾ, ಕನಯಿ ಕುನ್ಹಿರಾಮನ್, ಸರಬರಿ ರಾಯ್ ಚೌಧುರಿ ಮೊದಲಾದವರೊಂದಿಗೆ ವಾಸುದೇವ್ ತಾಂತ್ರಿಕತೆಯನ್ನು **(Technology)** ದುಡಿಸಿಕೊಂಡು 'ಕಲ್ಪವೃಕ್ಷ' ಶಿಲ್ಪವನ್ನು ಸೃಷ್ಟಿಸಿದ್ದು ಕುತೂಹಲಕಾರಿ.

" I had been working on 'he theme 'the tree of life' for a couple of years. Doing it in copper seemed a challenge, when this camp invitation came. I was using technology in my work for the first time. But I have not really gone too much out of my limits : I used it às a supplement. - S.G. Vasudev, Techno Art Camp -1982 ದಾಖಲೆಗಳ ಸಂಪುಟದಲ್ಲಿ

19. ಅನ್ವೇಷಣೆ : ಜುಲೈ – ಆಗಸ್ಟ್ ೧೯೮೮ ಸಂಚಿಕೆ : ೨೪–೨೫, ಸಂಪುಟ ೩, ಪುಟಗಳು ೩–೪.

20. ... But his concepts always prevail at a personal level. This is exemplified by his 'tree of life and death' series owing to a personal loss, the death of his artist wife Arnawaz..." - H.A. Anil Kumar, Times of India, 19.7.1992

ಗೋಳಿಸುವಂತೆ ‘Monkey and trees’ ಸೃಷ್ಟಿಯಾದವು. ಜೀವನೋತ್ಸಾಹದ ಚಟುವಟಿಕೆಗಳು ಸ್ಪಷ್ಟವಾಗಿ ಕಾಣಿಸಿಕೊಂಡವು. ಹಿಂದಿನ ‘ಮೈಥುನ’ ಶೀರ್ಷಿಕೆಯ ಕೃತಿಗಳಿಂದ ‘He and She’ ಬೆಳೆದು ಬಂದವು.

ಇಲ್ಲೆಲ್ಲಾ ಜನಪದೀಯ, ಪುರಾಣಗಳ ರೂಪಗಳು ಮತ್ತು ದ್ರಾವಿಡ ದೇವಾಲಯ ವಾಸ್ತು ಶಿಲ್ಪಗಳ ರೇಖೆಗಳು ವಿಶಿಷ್ಟವಾಗಿ ಹೊಂದಿಕೊಂಡವು. ಗಿರೀಶ್ ಕಾರ್ನಾಡ್‌ರ ಹಯವದನದ ಅಧ್ಯಯನದ ರೂಪಗಳು, ರಾಜಕೀಯ ವ್ಯಕ್ತಿಗಳ ಭಾಷಣ ಪ್ರೀತಿಯ ಆಣಕದ speeches ಕೃತಿಸರಣಿ, ಮಗುವಿನ ಸಂವೇದನೆಯ untitled ಕೃತಿಸರಣಿಗಳೂ ಮೂಡಿಬಂದವು. (೧೯೬೦) Maithuna, He, she and tree, He and she, tree of life and death, he and prison ಮೊದಲಾದ ರೇಖಾ ಚಿತ್ರಗಳಲ್ಲಿ ವಾಸುದೇವ್ ಸೂಕ್ಷ್ಮವಾಗಿ ಅರ್ನಾವಾಝ್‌ರವರ ರೇಖಾಚಿತ್ರಗಳ ಮೈವಳಿಕೆ, ತಂತ್ರಗಳನ್ನು ತಮ್ಮ ರೇಖೆಗಳ ಮೂಲಶಕ್ತಿಗೆ ಪೂರಕವಾಗಿ ತಂದುಕೊಂಡಿದ್ದಾರೆ.[22] ಹಾಗೆ ನೋಡಿದರೆ ಇಬ್ಬರ ಕಲೆಯಲ್ಲೂ ಪರಸ್ಪರ ಕೊಡು ಕೊಳ್ಳುವಿಕೆಯನ್ನು ಗಮನಿಸಬಹುದಾಗಿದೆ. ವಾಸುದೇವ್ ಬಸ್ತಾರ್ ನಿಂದ ತಂದಿದ್ದ ಆನೆ ಅರ್ನಾವಾಝ್ ರ ಕೃತಿಯಲ್ಲಿ ಕಾಣಿಸಿಕೊಂಡಂತೆಯೇ ಆಂಧ್ರದ ಸಂಪ್ರದಾಯ ರಾಮಾಯಣ ಚಿತ್ರಗಳನ್ನು ಅಧ್ಯಯನ ಮಾಡಿ ತಮ್ಮದೇ ಆದ ಮಿಶ್ರ ಮಾಧ್ಯಮದ ತಂತ್ರಗಳಲ್ಲಿ ಚಿತ್ರಿಸಿದ ಕೃತಿಗಳಲ್ಲಿ ‘ಸಂಸ್ಕಾರ’ ಎಂಬ ಶೀರ್ಷಿಕೆಯೂ ಇದ್ದಿತು. ವಸ್ತು ರಾಮಾಯಣವಾದರೂ ರಾವಣ ಸಂಸ್ಕಾರ, ಸಂಸ್ಕಾರ ಇತ್ಯಾದಿ ಶೀರ್ಷಿಕೆಗಳ ಹಿಂದೆ ವಾಸುದೇವ್‌ರವರೊಂದಿಗಿನ ಸಹ ಚರ್ಚೆಗಳು ಅಥವಾ ಕನ್ನಡ ಸಾಹಿತ್ಯದ ಶೀರ್ಷಿಕೆಗಳ ಪ್ರಭಾವವಾಗಿರಬಹುದು.[23]

೧೯೭೦ ಹೊತ್ತಿಗೆ ತಮ್ಮದೇ ಶೈಲಿ ಮತ್ತು ವಸ್ತುವನ್ನು ಸಾಧಿಸಿಕೊಂಡಿದ್ದ ವಾಸುದೇವ್ ಈ ಮೊದಲೇ ಒಮ್ಮೆ ಹೇಳಿರುವಂತೆ ಫ್ರಾನ್ಸಿಸ್ ನ್ಯೂಟನ್ ಸೌಝಾರಿಂದ ೧೯೬೦ರಲ್ಲಿ ಸಾಕಷ್ಟು ಪ್ರಭಾವಗೊಂಡಿದ್ದ ಅವರು ೧೯೭೨ರಲ್ಲಿ ‘He’ ಶೀರ್ಷಿಕೆಯ ಚಿತ್ರ ಸರಣಿಯಲ್ಲಿ ವಿಕೃತಿಯನ್ನು (Distrortion) ಅತ್ಯಂತ ಸುಂದರವಾಗಿ ದುಡಿಸಿಕೊಂಡಿದ್ದಾರೆ. Manscape ಶೀರ್ಷಿಕೆಯ ಕೃತಿ ಸರಣಿ ೧೯೮೧–೮೨ರ ನಡುವೆಯೇ ಅಲ್ಲದೇ ೧೯೮೮ರ ಅಂತ್ಯದಲ್ಲೂ ವಿಕೃತಿಯನ್ನು ದುಡಿಸಿಕೊಂಡು ಮೂಡಿಬಂದ ಅಪರೂಪದ ಈ “ವಿಕೃತಿಯ ಮುಖಗಳು” ನಮ್ಮ ಸಂದರ್ಭದಲ್ಲಿ ಅನನ್ಯತೆಯನ್ನು ಸಾಧಿಸಿದ್ದವು. ಇವೆಲ್ಲ Inscapes (ಒಳನೋಟಗಳು) ಶೀರ್ಷಿಕೆಯಡಿ ಒಮ್ಮೆ ಪ್ರದರ್ಶಿಸಲ್ಪಟ್ಟದ್ದೂ ಗಮನಾರ್ಹ.[24]

ಸೃಷ್ಟಿಪ್ರಕ್ರಿಯೆಯಲ್ಲಿ ಸದಾ ನಿರತರಾಗಿರುವ ವಾಸುದೇವ್‌ರ ಮನಸ್ಸು ಸಂವೇದನಾಶೀಲವಾದದ್ದು ಸುತ್ತಲಿನ ಎಲ್ಲದಕ್ಕೂ ಎಚ್ಚರದಿಂದ ಇದ್ದದ್ದು ಗಮನಿಸುವಂಥದ್ದು. ಪ್ರಕೃತಿ ಮನುಷ್ಯ, ಪ್ರಾಣಿ ಇತ್ಯಾದಿ ಜೀವಸಂಕುಲದ ಒಳ–ಹೊರಗುಗಳ ಅಭಿವ್ಯಕ್ತಿ ಹಲವು ಮಾಧ್ಯಮಗಳಲ್ಲಿ ೧೯೮೫ರಲ್ಲಿ

---

22. ಈ ಕೃತಿ ಸರಣಿಯ ಹಲವಾರು ರೇಖಾಚಿತ್ರಗಳು, ಛಾಯಾಚಿತ್ರ ತುಣುಕುಗಳನ್ನು ಸಂಕುಲದ ಮೊದಲ ಸಂಚಿಕೆಯು ಕಾವ್ಯಮಂಡಲಕ್ಕೆ ಗೋಪಾಲ ಕೃಷ್ಣ ಅಡಿಗರ ‘ಚಿಂತಾಮಣಿಯಲ್ಲಿ ಕಂಡ ಮುಖ’ ಕವನಕ್ಕಾಗಿ ರೂಪಿಸಿಕೊಟ್ಟ ಕಲಾಕೃತಿಯಲ್ಲಿ ಕೊಲಾಜ್ ಮಾಧ್ಯಮದಲ್ಲಿ ವಾಸುದೇವ್ ಬಳಸಿದ್ದಾರೆ. ನೋಡಿ : ಸಂಕುಲ : ಸಂಚಿಕೆ : ೧ ನವಂಬರ್ – ಡಿಸೆಂಬರ್ ೧೯೮೩, ಪುಟ : ೨೮

23. ಗಮನಿಸಿ : Arnawaz - Geetha Doctor ಪ್ರಕಾಶಕರು : Arnawaz Vasudev Charities Cholamandal Artists Village. Madras - 600041.

24. ನೋಡಿ : ಅನುಭವಿಸಿದಂತೆ ತೆರೆದುಕೊಳ್ಳುವ ಒಳನೋಟಗಳು : ಕೆ.ವಿ. ಸುಬ್ರಮಣ್ಯಂ, ಸಂಯುಕ್ತ ಕರ್ನಾಟಕ, ೧೪.೧೧.೧೯೮೩.

ಮೂಡಿಬಂದವು. ಪರಿಸರ ವಿನಾಶದ ನೋವಿನ ಅನುಭವ, ಪರಿಸರವನ್ನು ಸಂರಕ್ಷಿಸುವ ಆಶಯದ ಅಭಿವ್ಯಕ್ತಿಯಾಗಿ ಹಲವು ಕೃತಿಗಳಲ್ಲಿ ಕಾಣಿಸಿಕೊಂಡದ್ದು ವಾಸುದೇವ್ ರ ಮಟ್ಟಿಗೆ ಅಪೂರ್ವ, ಈ ನೋವಿನ ಮುಖಗಳು Human scape ಗಳಾಗಿಯೂ ಕಾಣಿಸಿಕೊಂಡವು ! Earth scapes ಮತ್ತು Human scape ಗಳಲ್ಲಿ ವಾಸುದೇವ್ ರವರ ಮಡದಿ ಅಮ್ಮು ಜೋಸೆಫ್ ರವರೊಂದಿಗಿನ ಬದುಕಿನ ಪರಸ್ಪರದ ಹಲವು ಮುಖಗಳಿವೆ. ಪರಿಸರ ಸಂರಕ್ಷಣೆಯೇ ಅಲ್ಲದೆ ಹಲವು ಸಾಮಾಜಿಕ ಸಮಸ್ಯೆಗಳ ಪರಿಹಾರಕ್ಕಾಗಿ ಬೌದ್ಧಿಕ ಮಟ್ಟದಲ್ಲಿ ಹೋರಾಡುತ್ತಿರುವ ಚಳುವಳಿಗಾರರೊಂದಿಗಿನ ಸಂಪರ್ಕಗಳ ಫಲವಾದ ಹಲವು ಆಯಾಮಗಳ ಪ್ರಭಾವಗಳು ಈ ಕೃತಿಗಳ ಸರಣಿಯಲ್ಲಿ ಕೆಲಸಮಾಡಿವೆ, ಹಾಗೆಯೇ ಅವರು ಚಿತ್ರಿಸುವಾಗ ಆಲಿಸುವ ಭಾರತೀಯ ಹಾಗೂ ಪಾಶ್ಚಾತ್ಯ ಸಂಗೀತಗಳ ಹಲವು ಆಯಾಮಗಳ ಪ್ರಭಾವಗಳು ಈ ಕೃತಿಗಳ ಸೌರಭವೂ ಮನಸ್ಸು ಕುಂಚ ಕೈಗಳನ್ನು ನಿರ್ದೇಶಿಸಿದೆ !

ಈ ನಡುವೆ ವಾಸುದೇವ್ ತಮ್ಮ ಪ್ರಿಯ ಮಿತ್ರ ದಿ. ಎ.ಕೆ. ರಾಮಾನುಜನ್ ರ ಕಾವ್ಯದಿಂದ ಪ್ರಭಾವಿತರಾಗಿ ರೇಖಾಚಿತ್ರಗಳನ್ನು ರಚಿಸಿದ್ದೂ ಉಂಟು ! ಹಾಗೆನೋಡಿದರೆ ಮೈಸೂರಿನಲ್ಲಿ ಹುಟ್ಟಿ, ಬಾಲ್ಯ ಕಳೆದ ಇಬ್ಬರಲ್ಲೂ ಹಲವು ವಿಷಯಗಳಲ್ಲಿ ಸಮಾನ ದೃಷ್ಟಿಯಿರುವುದನ್ನು ಗುರುತಿಸಬಹುದು. ಜಾನಪದ ಕಲೆ, ಸಾಹಿತ್ಯಗಳ ಕುರಿತ ಆಸಕ್ತಿ ಅಧ್ಯಯನ ಅವುಗಳಲೊಂದು, ಜೊತೆಗೆ ಆತ್ಮೀಯ ಸ್ನೇಹ, ವಾಸುದೇವ್‌ರವರ ಕಲೆ ರಾಮಾನುಜನ್‌ರಿಗೆ ಹೇಗೆ ಹತ್ತಿರ ವಾಗಿತ್ತೋ ಹಾಗೆಯೇ ರಾಮಾನುಜನ್‌ರ ಕಾವ್ಯವೂ ವಾಸುದೇವ್‌ರವರಿಗೆ ಹತ್ತಿರವಾಗಿತ್ತು.[25]

ಹೀಗೆ ಚಿತ್ರ-ಕಾವ್ಯ, ಸ್ನೇಹ - ಚರ್ಚೆ ಇತ್ಯಾದಿಗಳ ಪರಸ್ಪರದ ಕಾರಣವಾಗಿ ವಾಸುದೇವ್, ರಾಮಾನುಜನ್ ರ ಕಾವ್ಯದ ಆಳ ಹರವುಗಳಲ್ಲಿ ಈಜಾಡುವ 'A tribute to Ramanujan' ಶೀರ್ಷಿಕೆಯಡಿ ಹತ್ತಾರು ರೇಖಾಚಿತ್ರಗಳನ್ನು ರೇಖಿಸಿದರು.[26] ಬಿಂದುವಿನಿಂದಾರಂಭಿಸಿ ರೇಖೆಯಾಗಿ ನಡೆದು - ಬೆಳೆದು, ನಿಂತು, ಮತ್ತೆ ನಡೆದು, ಜಿಗಿದು, ಹಾರಿ, ಜಾರಿ, ಅಲುಗಾಡುವ ರೇಖಾ ರೂಪಗಳನ್ನು ಪೂರ್ಣಗೊಳಿಸುವ ಅವರು ಬೇಂದ್ರೆಯವರ ಕಾವ್ಯಕ್ಕೆ ರೇಖಿಸಿದ[27] 'the line' ಶೀರ್ಷಿಕೆಯ ಅಡಿ ಸೃಷ್ಟಿಯಾಗಿದ್ದ ರೇಖಾಚಿತ್ರಗಳಿಗಿಂತಲೂ ರಾಮಾನುಜನ್ ರ ಕಾವ್ಯವನ್ನು ದುಡಿಸಿಕೊಂಡ ರೇಖಾಚಿತ್ರಗಳಲ್ಲಿ ಕೋಮಲತೆಯಿದೆ. ಕಾವ್ಯದ ಸ್ವಚ್ಛಂದ ಲಯದ ಅನುಭವವಾಗುತ್ತದೆ. ಬಹುಷಃ ರಾಮಾನುಜನ್ ರ ಕೋಮಲಭಾವಗಳ ಪ್ರಭಾವ ವಿರಬಹುದು. ಸ್ವಚ್ಛಂದವಾಗಿ ಅಂಕು ಡೊಂಕು, ಬಿಂದು ರೇಖೆಗಳನ್ನು ಮತ್ತು ರೇಖೆಗಳಾಗಿ ಮುನ್ನಡೆದ ಬಿಂದುಗಳನ್ನು ಈ ಪ್ರಭಾವದ ನೆರಳಿನಲ್ಲಿ ವಿಶಿಷ್ಟವಾಗಿ ನಿರ್ವಹಿಸಿಕೊಂಡಿದ್ದಾರೆ. ವ್ಯಕ್ತಿಯೊಬ್ಬನ ಕೈ ಬರಹ, ರೇಖೆ ಅಥವಾ ಚಿತ್ರ ಆ ವ್ಯಕ್ತಿಯ ಅಂತರಂಗದ ಒಳನೋಟಗಳ ಮುಖಗಳನ್ನು ಸಂಕೇತಿಸುವಂತೆ ಇಲ್ಲಿನ ರೇಖೆಗಳು ಹರಿದಿರುವ ಮುರಿದಿರುವ, ಕೆಲವೊಮ್ಮೆ ದಿಟ್ಟ ರೀತಿಯಲ್ಲಿ ನಡೆದಿರುವ ನಡಿಗೆಯಲ್ಲಿ ವಾಸುದೇವ್‌ರನ್ನು

---

25. ವಾಸುದೇವ್ ಮುಖ್ಯವಾಗಿ ಅಡಿಗರ ಭೂಮಿಗೀತ, ಗಿರೀಶ್ ಕಾರ್ನಾಡ್ ರ ಹಲವು ಕೃತಿಗಳಿಗೆ, ಕೃಷ್ಣ ಆಲನ ಹಳ್ಳಿಯವರ ಕಾಡು ಕಾದಂಬರಿಗೆ, ಹಾಗೂ ಎ.ಕೆ. ರಾಮಾನುಜನ್ ರ ಕುಂಟೋಬಿಲ್ಲೆ, ಹೊಕ್ಕುಳಲ್ಲಿ ಹೂವಿಲ್ಲ ಇತ್ಯಾದಿ ಸಾಹಿತ್ಯ ಕೃತಿಗಳ ಮುಖ ಪುಟ ಚಿತ್ರಗಳನ್ನು ರಚಿಸಿಕೊಟ್ಟವರು.

26. ನೋಡಿ : "ಸ್ವಚ್ಛಂದ ಕಾವ್ಯದೊಂದಿಗೆ ಹರಿದ ಸ್ವಚ್ಛಂದ ರೇಖೆಗಳು" ಕೆ.ವಿ. ಸುಬ್ರಹ್ಮಣ್ಯಂ, ಸಂಕುಲ : ೧೨, ಸೆಪ್ಟಂಬರ್ -ಅಕ್ಟೋಬರ್, ೧೯೯೫ ಪುಟಗಳು : 31-36

27. ವಾಸುದೇವ್ ಕಲ್ಪವೃಕ್ಷ ವೃಂದಾವನಂಗಳಲ್ಲಿ ಕವನಕ್ಕೆ ರೇಖಿಸಿದ ರೇಖಾಚಿತ್ರಕ್ಕಾಗಿ ಅನ್ವೇಷಣೆ : ಜುಲೈ-ಆಗಸ್ಟ್ ೧೯೮೮ರ ಸಂಚಿಕೆಯ ಮುಖಪುಟ ನೋಡಿ.

ರಾಮಾನುಜನ್‌ರ ಸ್ವಚ್ಛಂದ ಛಂದಸ್ಸಿನ ಕಾವ್ಯದ ಪದ ಸಾಲುಗಳು ಪ್ರಭಾವಿಸಿರುವಂತಿವೆ. ಈ ರೇಖಾಚಿತ್ರಗಳನ್ನು ವಾಸುದೇವ್ illustration ಗಳಲ್ಲ, ರಾಮಾನುಜನ್ ರ ಕಾವ್ಯಕ್ಕೆ ನನ್ನ ಪ್ರತಿಕ್ರಿಯಾ ರೂಪದ ಅಭಿವ್ಯಕ್ತಿ ಎನ್ನುತ್ತಾರೆ.[28] ಹೌದು ಬಹುತೇಕ ಕೃತಿಗಳು ಹಾಗಿವೆ ; ಕೆಲವು ಸಾಂದರ್ಭಿಕ ಚಿತ್ರಗಳ ನೆಲೆಯಲ್ಲಿಯೇ ಇವೆ, ಕೆಲವು ಸಾಂದರ್ಭಿಕ ಚಿತ್ರಗಳ ನೆಲೆಯಲ್ಲಿಯೇ ಇವೆ, ಕೆಲವು ಸುಂದರ, ಕಲೆವು ಸಾಮಾನ್ಯ, ಇಲ್ಲೆಲ್ಲಾ ಅವರು ಸಾಂದರ್ಭಿಕ ಚಿತ್ರ ಮತ್ತು ಕಲೆಗಳೆರಡರ ನಡುವಿನ ಸೂಕ್ಷ್ಮಾತಿ ಸೂಕ್ಷ್ಮ ರೇಖೆಯ ಅತ್ತಿತ್ತ ರಾಮಾನುಜನ್ ಖುಷಿ ಪಡುವ 'ಕುಂಟೋಬಿಲ್ಲೆ' ಆಡಿದ್ದಾರೆ. ಆದಿಮ (primitive) ಮತ್ತು ಜಾನಪದೀಯ ಹಾಗೂ ಮಗುವಿನ ಮುಗ್ಧಸಂವೇದನೆಯ (child sensibility) ಚಿತ್ರಕಲೆಯ ಔನ್ನತ್ಯಗಳನ್ನು ತಮ್ಮ ರೇಖೆ ರೂಪಗಳಲ್ಲಿ ತುಂಬಿಕೊಂಡೇ ಅವರು ರಾಮಾನುಜನ್ ರ ಕಾವ್ಯದ ಧ್ವನಿಗೆ ಹಲವಾರು ಕೃತಿಗಳಲ್ಲಿ ಗಂಭೀರ ಶೃತಿಯಾಗಿದ್ದಾರೆ. ಕೆಲವು ಕೃತಿಗಳಲ್ಲಿ ತಮ್ಮತನದ ಹೊಳಹುಗಳನ್ನು ಲೇಪಿಸಿದ್ದಾರೆ. ಅವರ ವರ್ಣ ಚಿತ್ರಗಳಲ್ಲಿ ಕಾಣಿಸಿಕೊಳ್ಳುವ ಅವರ ಟ್ರೇಡ್ ಮಾರ್ಕ್‌ಗಳೆಂದು ಹೇಳಬಹುದಾದ ಸೃಷ್ಟಿಯ ಜೀವಸಂಕುಲದ ಜನಪದೀಯ ರೂಪಗಳು, ನಾಯಕ ಆಳ್ವಿಕೆಯ ಕಾಲದ ಭಿತ್ತಿ ಚಿತ್ರಕಲಾರೂಪಗಳಲ್ಲಿ ಕಾಣುವ ಸರಳೀಕೃತ ರೇಖೆಗಳ ನದಿ–ಮೀನುಗಳ ಕಲ್ಪನೆಗಳು, ಧೂಳಿನ ಕಣಗಳಂಥ ಬಿಂದುಗಳ ಸಮೂಹ, ಬಸವನಹುಳುವಿನ ಪಾದಗಳಂಥ, ನವಿಲುಗರಿಯ ಕೋಮಲತೆಯಂಥ ರೇಖಾ ತುಣುಕುಗಳು, ಹಕ್ಕಿ ಹಾಡಿನ, ಗಿಡ, ಮರ, ಬೆಟ್ಟ,. ಪ್ರಾಣಿ, ಮನುಷ್ಯ ಮೊದಲಾದ ರೂಪಗಳ ಚಿತ್ರ ಭಾಷೆಯು (pictorial language) ರಾಮಾನುಜನ್ ರ ಅಕ್ಷರ ಭಾಷೆಯ ಸ್ಥಾನ ಪಲ್ಲಟ ಗೊಳಿಸಿ, ಹಲವು ಕಲಾಕೃತಿಗಳಾಗಿ ತುಂಬಿಕೊಂಡಿದೆ.

'ಕುಂಟೋಬಿಲ್ಲೆ', 'ಸೃಷ್ಟಿ', 'ಸಮುದ್ರ ಮಥನ', 'ಜಿನ್' ಕೃತಿಗಳ ಕಲ್ಪನೆ ಸುಂದರ. 'ಜಿನ್' ಕೃತಿಯನ್ನು ಕಪ್ಪು ಕಾಗದದ ಅವಕಾಶದಲ್ಲಿ (space) ಬೆಳ್ಳಿಯ ಬಣ್ಣದ ಹೊಳೆವ ರೇಖೆಗಳಲ್ಲಿ ರೇಖಿಸಿರುವುದು ಗಮನಿಸುವಂತಿದೆ. ಈ ಕೃತಿಯಲ್ಲಿ ಅವರು ವಿಶಿಷ್ಟವಾಗಿ ವಿಕೃತ ಗೊಳಿಸಿದ ರೇಖಾರೂಪದ ಅಹಿರಾಮ್ಯಗಡ ಕಲ್ಪನೆ ತನ್ನ ಅಸ್ಪಷ್ಟತೆಯೊಂದಿಗೆ ತಾನೇ ತಾನಾಗಿ ಅನನ್ಯ ಕಲಾಕೃತಿಯಾಗಿ ಮೆರೆದಿದೆ. ಅಡಿಗರ ಚಿಂತಾಮಣಿಯಲ್ಲಿ ಕಂಡ ಮುಖ[29] ಕವನವನ್ನು ಚಿತ್ರಿಸಿದಾಗ ಆ ಕವನದ ಹತ್ತಾರು ವಿವರಗಳ ಜೊತೆಗೆ, ಅಡಿಗರೇ ಹೇಳುವ ಮೌನ. ನಿಗೂಢ, ಗಂಭೀರ ಹುಡುಕಾಟ ಇತ್ಯಾದಿಗಳ ನಡುವೆ ವಾಸುದೇವ್ ರ ಕಲ್ಪನೆ ಯಶಸ್ಸು ಸಾಧಿಸಿದ್ದು ಅವರು, ಬಳಸಿರುವ ಮಿಶ್ರಮಾಧ್ಯಮ ಮತ್ತು ಅದರ ವಿಶಿಷ್ಟ ನಿರ್ವಹಣೆಯಿಂದ. ಆದರೆ ರಾಮಾನುಜನ್ ರ ಕವನಗಳಲ್ಲಿ ಇರುವ ಅಕ್ಷರ ಪ್ರತಿಮೆಗಳು ಸ್ವಚ್ಛಂದವಾಗಿ ಬಿಚ್ಚಿಡುವ ಹಾಗೂ ಸಂವೇದನಾಶೀಲತೆಯಿಂದ ಬಚ್ಚಿಡುವ ಅರ್ಥಗಳ ತೀವ್ರತೆಯು ಪರಿಮಿತಗಳ ರೇಖೆಗಳಲ್ಲಿ ಬಿಗಿಯಾಗಿಕಾಣಿಸಿಕೊಳ್ಳದೆ ಹೋಗಿರಬಹುದು. ಹಾಗೆಯೇ ರಾಮಾನುಜನ್‌ರ ಕೆಲವು ಕವನಗಳು ಹಲವು ಬಾರಿ ವಾಸುದೇವ್ ರೇಖಾಚಿತ್ರಗಳಲ್ಲಿ ಕಾಣಿಸಿಕೊಂಡಿದ್ದರೆ, ಕೆಲವುಕವನಗಳು ತಮ್ಮ ಸಾಮಾನ್ಯ ನೆಲೆಯ ಕಾರಣದಿಂದ ವಾಸುದೇವ್‌ರನ್ನು ಸ್ಪಂದಿಸದಿರುವುದು ಕುತೂಹಲಕಾರಿ. ಸ್ವಚ್ಛಂದ ಛಂದಸ್ಸಿನ ಸಾಲುಗಳಿಗೆ ಸ್ವಚ್ಛಂದ ಲಯದ ರೇಖೆಗಳವು.

---

28. ಹೆಚ್.ಎ. ಅನಿಲ್ ಕುಮಾರ್ ರ 'ಇಲ್ಲಿ ಕವಿ ಮತ್ತು ಕಲಾವಿದ ತಮ್ಮ ತಮ್ಮ ಪಾತ್ರಗಳನ್ನುಬದಲಾಯಿಸಿ ಕೊಂಡು ಬಿಟ್ಟಿದ್ದಾರೆ' ದೃಷ್ಟಿಗಾಗಿ ನೋಡಿ, ರೂಪ್ರ: ಜುಲೈ-ಆಗಸ್ಟ್, ೧೯೯೫, ಪು: ೬೭-೬೮.

29. ನೋಡಿ : ಸಂಕುಲ : ಸಂಚಿಕೆ: ೧ ನವೆಂಬರ್-ಡಿಸೆಂಬರ್ ೧೯೯೩ ಕಾವ್ಯಮಂಡಲ : ಪು : ೫೫-೫೮

೧೯೯೮ರಲ್ಲಿ ಬೆಂಗಳೂರಿನ ಕ್ರಾಫ್ಟ್ ಕೌನ್ಸಿಲ್ ಆಫ್ ಕರ್ನಾಟಕವು ಮರದ INLAY ತಂತ್ರದಲ್ಲಿ ವಾಸುದೇವ್‌ರ ಕಲೆಯ ರೂಪಗಳನ್ನು ಅತ್ಯಂತ ಕುಶಲತೆಯಿಂದ ಅಳವಡಿಸಿ ಮಾರಾಟಕ್ಕೆ ಬಿಡುಗಡೆ ಮಾಡಿತು. ಕಲೆ ಮತ್ತು ಕರಕುಶಲ ಕಲೆಗಳ ಪರಸ್ಪರ ಹೊಂದಾಣಿಕೆ ಜನಸಾಮಾನ್ಯರಲ್ಲಿ ಕಲೆಯ ಅಭಿರುಚಿ ಹೆಚ್ಚಿಸುವಲ್ಲಿ ನೆರವಾಗಬಲ್ಲದು. ಈ ತಂತ್ರದಲ್ಲಿ ವಾಸುದೇವ್ ರವರ ಮುಖವೊಂದು ವಿಕೃತ ಸೌಂದರ್ಯದೊಂದಿಗೆ expressionistic ಆದ ಭಾವಚಿತ್ರವಾಗಿ ಮೂಡಿ ಬಂದಿರುವುದು ಕುತೂಹಲಕಾರಿ. ಈ ಒಂದೆ ಶೋಲಾ ಪುರ್ ಕರ್ ಪ್ರಯತ್ನಿಸಿದ್ದ ಕೆಲವು ರೊಮ್ಯಾಂಟಿಕ್ ಭಾವಚಿತ್ರಗಳಿಗಿಂತಲೂ ವಾಸುದೇವ್ ಇನ್‌ಲೇ ಭಾವಚಿತ್ರ ಹೆಚ್ಚು ಪರಿಣಾಮಕಾರಿ, ಸಮಕಾಲೀನ. ಈ ನಿಟ್ಟಿನಲ್ಲಿ ಅವರು ಟ್ಯಾಪೆಸ್ಟ್ರಿ (ಚಿತ್ರವಸ್ತ್ರ) ಗಳಲ್ಲೂ ಅಭಿವ್ಯಕ್ತಿಸಿದ್ದಾರೆ.

ವಾಸುದೇವ್‌ರ ಅಭಿವ್ಯಕ್ತಿಯಲ್ಲಿ ಹೊಸ ರೂಪ, ಸಂಯೋಜನೆಗಳು :

ಸಮಕಾಲೀನ ಸಾಂಸ್ಕೃತಿಕ ಪದರಗಳ ಪಲ್ಲವಿ ಹಾಗೂ ಪಲ್ಲಟಗಳಲ್ಲಿ ಬದುಕಿನಗ್ರಹಿಕೆಗಳ ಪ್ರಕ್ಷುಬ್ಧತೆಯಿದೆ. ಕ್ಷೋಭೆಗೊಂಡ ಕಲಾವಿದ ನಮ್ಮ ಕಣ್ಣುಗಳಿಗೆ ವಿಕೃತ ಸೌಂದರ್ಯದ, ಅಸಾಮಾನ್ಯ ಅನುಭವದ ದರ್ಶನ ನೀಡುವ ರೂಪಗಳನ್ನು ಸೃಷ್ಟಿಸುತ್ತಾನೆ. ನಾವು ಪ್ರತಿನಿತ್ಯ ನೋಡುತ್ತಿರುವ ನೋಡಿರುವ ಜನರು, ಸಂದರ್ಭಗಳು, ಅಲ್ಲಿ ಅಪೂರ್ಣ ವರ್ತಮಾನ ಕಾಲೀನ ಅನುಭವಗಳಾಗಿ, ಜನಪದೀಯ ಸತ್ವಗಳನ್ನು ತುಂಬಿಕೊಂಡು ಜಾತ್ರೆಯ ಸಡಗರದಂತೆ ಕಾಣಿಸಿಕೊಳ್ಳುತ್ತವೆ. ಈ ಸಡಗರ ಭೂತ 'ವರ್ತಮಾನ' ಭವಿಷ್ಯಗಳ ಒಡಲಿಂದ ಬಂದಂತಿರುತ್ತವೆ. ವಾಸುದೇವ್‌ರ 'Future-Re collection', ೧೯೯೭-೯೮ ರ ಕಲಾಕೃತಿಗಳ ರೂಪ ಆಶಯ ಹಾಗೂ ನಿರ್ವಹಣೆಗಳು ಈ ಮಾತುಗಳಿಗೆ ಪೂರಕವಾಗಿವೆ.

ತಮ್ಮ ಅಭಿವ್ಯಕ್ತಿಯ ನಾಲ್ಕು ದಶಕಗಳಲ್ಲಿ ವಾಸುದೇವ್ ಹಲವು ಮಜಲುಗಳನ್ನು ದಾಟಿ ಬಂದಿದ್ದಾರೆ. ಅನುಭವ ಗ್ರಹಿಕೆಗಳ ತೀವ್ರತೆಯ ವೈವಿಧ್ಯದಿಂದ ಸಹಜವಾಗಿಯೇ ಅವರ ಕಲಾಕೃತಿಗಳಲ್ಲಿನ ರೂಪ ಅಥವಾ ಚಿತ್ರಭಾಷೆ ರೂಪಾಂತರಗೊಳ್ಳುತ್ತ ಬಂದಿದೆ. ಬದುಕನ್ನೇ ರಂಗಭೂಮಿಯಾಗಿ ಪರಿಭಾವಿಸಿ ಜನರನ್ನು ನಟರನ್ನಾಗಿ ನೋಡುತ್ತಿರುವ ೧೯೯೮ರ ವಾಸುದೇವ್ ಈ ಮುನ್ನ 'ವೃಕ್ಷ' ಬದುಕಿನ ವೃಕ್ಷಗಳ ಅಭಿವ್ಯಕ್ತಿಯ ನಂತರ 'ಅವನು', 'ಅವಳು' ಶೀರ್ಷಿಕೆಯಡಿ ಹಲವರನ್ನು ಅವರದೇ ಆದ ಶೈಲಿಯಲ್ಲಿ, ರೊಮ್ಯಾಂಟಿಕ್ ಆಗಿ ಕೆಲವೊಮ್ಮೆ ಎಕ್ಸ್‌ಪ್ರೆಷನಿಷ್ಟರಿಗೆ ಹತ್ತಿರವಾಗಿಯೂ ಚಿತ್ರಿಸಿದ್ದವರು. ಅವನು, ಅವಳು, ಎಂದು ಸಂಬೋಧಿಸಲ್ಪಡುತ್ತಿದ್ದ ಗಂಡು, ಹೆಣ್ಣುರೂಪಗಳು ಪ್ರಸ್ತುತ ಕೃತಿಗಳಲ್ಲಿ ನಟರಾಗಿ ಅಂದರೆ ವಾಸುದೇವ್ ರ ಕಲಾಕೃತಿಗಳಲ್ಲಿ ತಮ್ಮನ್ನು ಅನಾವರಣ ಗೊಳಿಸಿಕೊಳ್ಳುತ್ತಿರುವ ನಟರಾಗಿ ಕಾಣಿಸಿಕೊಂಡಿದ್ದಾರೆ, ಜನರೆಲ್ಲಾ ಪ್ರೇಕ್ಷಕರಾಗಿ ಪಾಲ್ಗೊಂಡಿದ್ದಾರೆ. ಹೀಗಾಗಿ ಈ ಕಲಾಕೃತಿಗಳ ಮಾಲೆಯನ್ನು Theatre of life ಶೀರ್ಷಿಕೆಯಿಂದ ವಾಸುದೇವ್ ಕರೆದಿದ್ದಾರೆ. ಮಾಧ್ಯಮ; ತೈಲವರ್ಣ, ಅವಕಾಶ, ಕ್ಯಾನ್‌ವಾಸ್.

ಬೆಂಗಳೂರಿನ ಹೊರವಲಯದ ಗ್ರಾಮೀಣ ನೆಲೆಯ ತಮ್ಮ ತೋಟದ ಸ್ಟುಡಿಯೋದಲ್ಲಿ ಚಿತ್ರಿಸುವ ಪ್ರಕ್ರಿಯೆಯ ಸಂದರ್ಭದಲ್ಲಿ ಪ್ರಭಾವಿಸಿದ ಸುತ್ತಲಿನ ಜನರ ಸಾಮಾಜಿಕ ಸಾಂಸ್ಕೃತಿಕ ಆಚರಣೆ ಹಬ್ಬ ನಡವಳಿಕೆಗಳು, ಮನರಂಜನೆಗಾಗಿ ಅವಲಂಬಿಸುವ ಮೂಲಗಳು ಇತ್ಯಾದಿಗಳಲ್ಲಿ ಜನಪ್ರಿಯ ಸಂಸ್ಕೃತಿಯ ಉಗಮದ ಬೇರುಗಳನ್ನು ವಾಸು ದೇವ್ ರವರಿಗೆ ಪರಿಚಯಿಸುತ್ತಲೇ ಅವರನ್ನುಕಾಡಿ ಅಭಿವ್ಯಕ್ತಿಸಲ್ಪಟ್ಟಿರುವುದು ಗಮನಾರ್ಹ. ಸಮಕಾಲೀನವಾಗಿ ಜನಪ್ರಿಯ ಜಾನಪದೀಯ

ಹಾಗೂ ಸಾಂಪ್ರದಾಯಿಕ ಕಲಾಪ್ರಜ್ಞೆಗಳನ್ನು ವಾಸುದೇವ್ ವೈರುಧ್ಯಮಯ ಅನುಭವಗಳ ನಡುವೆಯೂ ಅತ್ಯಂತ ತೀವ್ರತೆಯಿಂದ ತಂದುಕೊಂಡಿದ್ದಾರೆ.

ಬುದ್ಧಿಜೀವಿಗಳು ದೂರದರ್ಶನವನ್ನು ಟೀಕಿಸುತ್ತ ನಡೆದಿದ್ದರೆ ಅದರ ಪ್ರಾಮುಖ್ಯತೆಯನ್ನು ಗ್ರಾಮೀಣರು ಕಂಡುಕೊಂಡಿರುವ ಪರಿಯನ್ನು ವಾಸುದೇವ್ ಕುತೂಹಲದಿಂದ ಗ್ರಹಿಸಿದ್ದಾರೆ ! ಬಾಬು ಈಶ್ವರ ಪ್ರಸಾದ್ ಡಿಸೆಂಬರ್, ೧೯೯೮ರ ಸಾಕ್ಷಿಗ್ಯಾಲರಿಯ ಪ್ರತಿಷ್ಠಾಪನಾ ಅಭಿವ್ಯಕ್ತಿಯಲ್ಲಿ ಕ್ಯಾಮರಾ, ಸಿನಿಮಾ ಹಾಗೂ ದೂರ ದೂರದರ್ಶನಗಳ ಪ್ರಾಮುಖ್ಯತೆಯನ್ನು ಬೆಳವಣಿಗೆಯ ಹಂತಗಳನ್ನು ಐತಿಹಾಸಿಕ ಅಗತ್ಯ ಮತ್ತು ಮಹತ್ವಗಳಿಂದ ಅಭಿವ್ಯಕ್ತಿಸಿರುವುದೂ ಇಲ್ಲಿ ನೆನಪಾಗುತ್ತದೆ. ಗ್ರಾಮೀಣ ಹಬ್ಬ, ಧ್ವನಿವರ್ಧಕದಿಂದ ಅಲೆ ಅಲೆಯಾಗಿ ಮೂಡಿಬರುವ ಸಂಗೀತದ ಆಕರ್ಷಣೆ ಇಂದಿಗೂ ಆ ಜನರಲ್ಲಿ ಹರ್ಷ ಉಂಟು ಮಾಡುವುದು ವಾಸುದೇವ್ ರ ಕಲಾಕೃತಿಯೊಂದರಲ್ಲಿ ಅನುಭವಕ್ಕೆ ಬರುತ್ತದೆ. ಅಲ್ಲಿನ ಮದುವೆ, ಮೊದಲ ರಾತ್ರಿಗಳೂ ಕಾಣಿಸಿಕೊಂಡಿವೆ !

ಕನ್ನಡ ಸಾಹಿತ್ಯ- ಕನ್ನಡ ಜಾನಪದ, ಸಿನಿಮಾ, ರಂಗ ಭೂಮಿಯ ವಸ್ತು, ಆಶಯಗಳು ವಾಸುದೇವ್‌ರ ಅಭಿವ್ಯಕ್ತಿಯ ಮೇಲೆ ಸಾಕಷ್ಟು ಪ್ರಭಾವ ಬೀರಿವೆ. ಎ.ಕೆ. ರಾಮಾನುಜನ್, ಗಿರೀಶ್ ಕಾರ್ನಾಡ್‌ರವರುಗಳ ಜಾನಪದ ಪುರಾಣಗಳ ಮೂಲದ ಚಿಂತನೆಯ ಸಾಹಿತ್ಯ ಕೃತಿಗಳ ಇಂದಿಗೂ ಅವರ ಕೃತಿಗಳಲ್ಲಿ ಕಾಣಿಸಿಕೊಳ್ಳುತ್ತಲೇ ಇವೆ. ಕಾರ್ನಾಡ್‌ರ ಹಯವದನ ಹಲವು ಕೃತಿಗಳಲ್ಲಿ ಮರುಕಳಿಸಿ ಆಕರ್ಷಿಸಿದರೆ ರಾಮಾನುಜನ್ ರ ಜಾನಪದೀಯ ಅಧ್ಯಯನ ಹಾಗೂ ಸಮಕಾಲೀನ ಕಾವ್ಯ ಹಲವು ರೀತಿಗಳಲ್ಲಿ 1999ರ ಕೃತಿಗಳಲ್ಲಿ ಇಣುಕಿ ನೋಡಿವೆ. ವಸಾಹತು ಶಾಹಿ ಮೂಲದ ರೂಪಗಳೂ ಕೆಲವು ಕೃತಿಗಳಲ್ಲಿ ಕಾಣಿಸಿಕೊಂಡಿವೆ.

ಬಾಲ್ಯದ (Child sensibility) ಸಂವೇದನೆ ಹಲವು ಕೃತಿಗಳಲ್ಲಿ ಕಾಣಿಸಿಕೊಂಡಿದೆ. ಅವರ ಅಜ್ಜನುಹೇಳಿದ ಕತೆಗಳೇ ಅಲ್ಲದೆ ಇತರರಿಂದ ಕೇಳಿದ ಓದಿದ ಕಥೆಗಳೂ, ಮೈಸೂರಿನ ಬಾಲ್ಯದ ದಿನಗಳಲ್ಲಿ ಆನೆ ಕರೋಟಿಯ ದರ್ಶನ, ದಸರಾ ದಿನಗಳ ಆನೆಗಳ ನೆನಪೂ ಅಷ್ಟೆ. ಬದು ಹಿಂದಿನ ವೃಕ್ಷವೂ ರೂಪಾಂತರಗೊಂಡು ಕೆಲವು ಕೃತಿಗಳಲ್ಲಿ ಕಾಣಿಸಿಕೊಂಡಿದೆ. ಆಲನಹಳ್ಳಿ ಕೃಷ್ಣ ರವರ ಕಾಡು ಕಾದಂಬರಿಯ ತಮ್ಮ ಕೊಲಾಜ್ ಮುಖ ಪುಟವನ್ನೇ ನೆನಪಿಸುವಂಥ ಹಾಗೂ ಇನ್ನೂ ವಿವಿಧ ರೂಪಗಳ ವೃಕ್ಷಗಳು, ಮಾನವ ರೂಪ ಮುಖಗಳೂ ವೃಕ್ಷಗಳಾಗಿ ಮೂಡಿಬಂದ ರೂಪಗಳೂ ಇಲ್ಲಿವೆ; ಜಾನಪದ ಚಿಂತನಾಕ್ರಮ ದೇಶೀದರ್ಶನಗಳ ಪ್ರಭಾವವೂ ಗಾಢವಾಗಿದೆ.

ಇನ್ನು ವಾಸುದೇವ್ ರವರ ಹಲವು ಪುಟ್ಟ ಕೃತಿಗಳಲ್ಲಿ ಕಪ್ಪು ಬಣ್ಣವೈಭವೀಕೃತಗೊಂಡಿರುವುದರ ಜೊತೆಗೆ ವಿಕೃತ (Distortion) ಗೊಂಡಿರುವ ರೂಪ ಸೌಂದರ್ಯ, ಚೂಪು ಮೊನೆಯಿಂದ ಕರೆದು ಮಡಿಸಿಕೊಂಡಿರುವ ರೇಖೆಗಳು ಅಲ್ಲಲ್ಲಿ ಕಾಣಸಿಕೊಂಡಿರುವ ಕೆಂಪುಬಣ್ಣ ಗಮನಾರ್ಹ. ಸಿಹಿಯಾದ ಬಣ್ಣಗಳು ಕಾಣದೆ, ಕಣ್ಣಿಗೆ ಹಿತವಾದ ಗಂಭೀರ ಬಣ್ಣಗಳನ್ನು ಸಂಯೋಜಿಸಿರುವುದು ಅವರ ಆಶಯಕ್ಕೆ ಪೂರಕವಾಗಿದೆ. ಚೋಳಮಂಡಳದ ಸಮುದ್ರ ತೀರದಲ್ಲಿನ ಸ್ಮಶಾನ, ಅಲ್ಲಿಯೇ ಗುರು ಪಣಿಕ್ಕರ್ ಮತ್ತು ಅರ್ನಾವಾಝ್‌ರವರುಗಳ ಅಂತಿಮ ಕ್ರಿಯೆಗಳನ್ನು ನಡೆಸಿದ ನೆನಪುಗಳು ಕಾಡಿ ಕೃತಿಯೊಂದರಲ್ಲಿ ಅಭಿವ್ಯಕ್ತಿಗೊಂಡಿವೆ. ಇಲ್ಲಿನ ವರ್ಣ ಸಂಯೋಜನೆ ಕಪ್ಪು, ಗಾಢ ಹಸಿರು, ಕಂದು, ಹಾಗೂ, ಉರಿ ಹೊಗೆಗಳನ್ನು ಚಿತ್ರಿಸಿರುವ ಬಣ್ಣಗಳು, ನಡುಗುತ್ತಿರುವ ಮುಖಗಳು Theatre of life ಶೀರ್ಷಿಕೆಗೆ ಪೂರಕವಾಗಿ ಮೂಡಿಬಂದಿವೆ. ಈ ಎಲ್ಲ ಕೃತಿಗಳಲ್ಲೂ ಅವಕಾಶ (space) ವನ್ನು ನಿರ್ವಹಿಸಿಕೊಂಡಿರುವ ರೀತಿಯಲ್ಲಿ ಕುತೂಹಲಕಾರಿ

ವೈವಿಧ್ಯವಿದೆ. ಮುಖಗಳು, ಜಾನಪದೀಯ ಸತ್ವಗಳ ರೇಖೆ ಕ್ಯಾಲಿಗ್ರಾಫಿ, ರೂಪಗಳನ್ನೇ ಅಲ್ಲದೆ ಸಮಕಾಲೀನವಾಗಿ, ಸೌಝಾನ ವಿಕೃತಿಯನ್ನು ತಮ್ಮದೇ ಆದ ರೀತಿಯಲ್ಲಿ, ಕಪ್ಪು ಬಣ್ಣದ ವೈಫವೀಕರಣದಲ್ಲಿ ವಾಸುದೇವ್ ರವರಿಂದ ರೂಪಿಸಿಕೊಂಡಿವೆ. ಇನ್ನೂ ಕೆಲವು ಮುಖಗಳು (ನೂರು ಎನ್ನಿ) ವಾಸುದೇವ್ ರವರ ರೇಖೆ ಕ್ಯಾಲಿಗ್ರಾಫಿ ಮೈವಳಿಕೆ ಹಾಗೂ ವಿಕೃತಿ ಸೌಂದರ್ಯಗಳಿಂದ ಅನನ್ಯವಾಗಿ ಮೂಡಿಬಂದಿವೆ. ತಮ್ಮ ರೇಖೆ, ಬಣ್ಣ, ರೂಪಗಳಲ್ಲಿ ಪೌರ್ವಾತ್ಯ ಚಿಂತನೆಯ ಫಲದಂತೆ ಇಂದಿನ ಗ್ರಾಮೀಣ ಭಾರತೀಯ ಬದುಕಿನ ಒಳನೋಟಗಳನ್ನು ತೋರುತ್ತಿರುವ ವಾಸುದೇವ್ ನಮ್ಮ ಸಾಂಸ್ಕೃತಿಕ ರಂಗದ ಪ್ರಮುಖರಲ್ಲಿ ಒಬ್ಬರಾಗಿ ಅಭಿವ್ಯಕ್ತಿಯ ಅನನ್ಯತೆಯಿಂದ ಪ್ರಭಾವಶಾಲಿ ಕಲಾವಿದರಾಗಿದ್ದಾರೆ.



'ವೃಕ್ಷ' - 1984
ಮಾಧ್ಯಮ: ತೈಲವರ್ಣ
ವೈಶಾಲ್ಯ: 77 ಸೆಂ.ಮೀ X 90 ಸೆಂ.ಮೀ

"VRIKSHA" - 1984
Medium: Oil on canvas
Size: 77 X 90 cms



‘ಥಿಯೇಟರ್ ಆಫ್ ಲೈಫ್’ - 1999
ಮಾಧ್ಯಮ: ರೇಷ್ಮೆಯ ಚಿತ್ರವಸ್ತ್ರ
ವೈಶಾಲ್ಯ: 83 ಸೆಂ.ಮೀ X 123 ಸೆಂ.ಮೀ

"THEATER OF LIFE"
Tapestry in silk - 1999
Size: 83 X 123 cms



'ಮ್ಯಾನ್' - 1992
ಮಾಧ್ಯಮ: ತೈಲವರ್ಣ
ವೈಶಾಲ್ಯ: 120 ಸೆಂ.ಮೀ X 150 ಸೆಂ.ಮೀ

"MAN" - 1992
Medium: Oil on canvas
Size: 120 X 150 cms



'ಹ್ಯೂಮನ್ ಸ್ಕೇಪ್' - 1996
ಮಾಧ್ಯಮ: ತೈಲವರ್ಣ
ಷೆಶಾಲ್ಯ: 26 ಸೆಂ.ಮೀ X 38.5 ಸೆಂ.ಮೀ

"HUMAN SCAPE" - 1996
Medium: Oil on canvas
Size: 26 X 38.5 cms



‘ಮೈಥುನ’ - 1992
ಮಾಧ್ಯಮ: ತಾಮ್ರದ ಉಬ್ಬು ಶಿಲ್ಪ
ವೈಶಾಲ್ಯ: 60 ಸೆಂ.ಮೀ X120 ಸೆಂ.ಮೀ

"MITHUNA" - 1992
Medium: Copper relief sculpture
Size: 60 X 120 cms



oto by : Mallikarjun


‘ಥಿಯೇಟರ್ ಆಫ್ ಲೈಫ್’ - 1998
ಮಾಧ್ಯಮ: ತೈಲವರ್ಣ
ವೈಶಾಲ್ಯ: 31 ಸೆಂ.ಮೀ X54 ಸೆಂ.ಮೀ

"THEATER OF LIFE" - 19
Medium: Oil on canvas
Size: 31cms X 54 cms



'ವೃಕ್ಷ' - 1989
ಮಾಧ್ಯಮ: ತೈಲವರ್ಣ
ವೈಶಾಲ್ಯ: 80 ಸೆಂ.ಮೀ X150 ಸೆಂ.ಮೀ

"VRIKSHA" - 1989
Medium: Oil on canvas
Size: 80 cms X 150 cms




ಎ. ಕೆ. ರಾಮಾನುಜನ್‌ರವರ ಕವನ '' ಕಂಡಿದ್ದು '' - 1994
ಮಾಧ್ಯಮ: ಬೆಳ್ಳಿಯ ಬಣ್ಣದ ಇಂಕ್: ಕಾಗದದ ಅವಕಾಶ
ಷೈಕಾಲ್ಯ: 50 ಸೆಂ.ಮೀ X 80 ಸೆಂ.ಮೀ

"WHAT THE EYES SAW ?" - 1994
Medium: Silver ink on paper
Size. 50 cms X 80 cms



'ಎ. ಕೆ. ರಾಮಾನುಜನ್‌ರವರ ಕುಂಟೋ ಬಿಲ್ಲೆ' - 1994
ಮಾಧ್ಯಮ: ಕಾಗದದ ಅವಕಾಶದಲ್ಲಿ ಬೆಳ್ಳಿ ಬಣ್ಣದ ಇಂಕ್
ವೈಶಾಲ್ಯ: 50 ಸೆಂ.ಮೀ X 80 ಸೆಂ.ಮೀ

"HOPSCOTCH " - 1994
Medium. Silver ink on paper
Size: 50 cms X 80 cms



'ಥಿಯೇಟರ್ ಆಫ್ ಲೈಫ್' 1998
ಮಾಧ್ಯಮ: ತೈಲವರ್ಣ
ವೈಶಾಲ್ಯ: 45 ಸೆಂ.ಮೀ X 62 ಸೆಂ.ಮೀ

"THEATER OF LIFE" - 1998
Medium: Oil on canvas
Size: 45 cms X 62 cms



'ಫ್ಯಾಂಟಸಿ' - 1964

'FANTASY' - 1964



ಮ್ಯಾನ್‌ಸ್ಕೇಪ್ - 1998

ಮಾಧ್ಯಮ : ತೈಲವರ್ಣ

MANSCAPE -1998

Medium : Oil on canvas

S. G. Vasudev

Where did the infinite show itself? In nature, and all individual mythologies must be deduced from a philosophy of nature, through one's contemplation of the universe.

- Robert Hughes.[1]

The process of nature metamorphosing into art is an astonishing phenomenon. Equally interesting is the transformation of the man following, imitating and copying nature into an 'artist' who questions nature and recreates it in his work. His creative process, which alters and chocks our aesthetic precepts, has given myriad outlines to the history of art.

S.G. Vasudev is one among many artists who have trodden this path. He was born in a middle class Brahmin family from the old Mysore agrahara (Brahmins' quarters) on March 3, 1941. Traversing Mysore, Bangalore, Madras and other important art centres of India he has attained international acclaim today. His great grandfather, an ayurvedic doctor, was connceted with the Mysore palace for a long time and was interested in art. He was very good at creating soapstone sculptures. Dashavathara (ten incarnations of Lord Vishnu) was one of his many works in this medium. So Vasudev's mother and uncle were naturally attracted towards art.

